ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

Spend LESS and get MORE publicity
BENEFITS OF ADVERTISING
in Local Leading HAMPI TIMES Newspaper
1. Flexibility
2. Timeliness
3. Affordability
4. Engaged audience
5. Positive response
6. Targeted demographic
7. Trustworthy medium
8. Design options
ಹಂಪಿ ಟೈಮ್ಸ್
CALL US : 9448633038
Email us Your Advertisement Content to : hampitimes@gmail.com

ಸಂಪುಟ:01	ಸಂಚಿಕೆ:170	ನೋಂದಣಿ ನಂ.:KARKAN27911	ವಿಜಯನಗರ	30.11.2023	ಗುರುವಾರ	ಪುಟ:04	ಬೆಲೆ:2
Volume:01	Issue:170	Reg.No:KARKAN27911	VIJAYANAGARA	30.11.2023	Thursday	Page:04	Rs:2

ಹೋಲ್ ಸೇಲ್
ಧರದಲ್ಲಿ ವಾಣಿಜ್ಯ ಮತ್ತು ಗೃಹ ಬಳಕೆ ವಸ್ತುಗಳ ಮಾರಾಟ
ಮದುವೆ, ಹೋಟೆಲ್, ಗಿಫ್ಟ್, ಶುಭ ಸಮಾರಂಭ, ಪೂಜೆ, ಗೃಹ ಬಳಕೆ , ಅಡುಗೆ ವಿವಿಧ ಸಲಕರಣೆಗಳಿಗಾಗಿ ಭೇಟಿ ನೀಡಿ.
ಶ್ರೀ ರಾಜಲಕ್ಷ್ಮೀ ಏಜೆನ್ಸೀಸ್
Rajalakshmi
ಬಾಲಾ ಟಾಕೀಸ್ ಹತ್ತಿರ, ಶ್ರೀ ಬನ್ನಿ ಮಹಂಕಾಳಿ ಗುಡಿ ಪಕ್ಕದಲ್ಲಿ
ಹಂಪಿ ರಸ್ತೆ, ಹೊಸಪೇಟೆ
9242418650, 9986123989

ಮೈಕ್ರೋ ನ್ಯೂಸ್

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ.ವಿ.ಜಿ.

PLACE YOUR AD
HOUSE RENT / SALE / LEASE, CHANGE OF NAME, Notice Advertisement. & EVENT COVERAGE
Contact
9448633038
Near Valmiki Circle, HOSAPETE-583201
Email:hampitimes@gmail.com

ಡಿ.2ರಂದು ಹೊಸಪೇಟೆಯ ವಿವಿಧೆಡೆ ವಿದ್ಯುತ್ ವ್ಯತ್ಯಯ

ಹಂಪಿ ಟೈಮ್ಸ್ ಹೊಸಪೇಟೆ

110 ಕೆವಿ ಸಂಕ್ಲಾಪುರ ವಿದ್ಯುತ್ ವಿತರಣಾ ಕೇಂದ್ರದಲ್ಲಿ ನಿರ್ವಹಣೆ ಕೆಲಸ ನಡೆಯುತ್ತಿರುವ ಪ್ರಯುಕ್ತ ಡಿಸೆಂಬರ್ 2ರಂದು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ವಿವಿಧ ಏರಿಯಾಗಳ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಜೆಸ್ಕಾಂ ಹೊಸಪೇಟೆ ನಗರ ಉಪವಿಭಾಗ–1ರ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ. ಹೊಸಪೇಟೆ ನಗರ ವಿಭಾಗಕ್ಕೆ ಬರುವ ಎನ್.ಸಿ ಕಾಲೋನಿ, ಚಪ್ಪರದಹಳ್ಳಿ, ಎಸ್.ಆರ್ ನಗರ, ಎಂ.ಜೆ ನಗರ, ಗಾಂಧಿ ಕಾಲೋನಿ, ಬಿ.ಟಿ.ಆರ್ ನಗರ, ವಿದ್ಯಾನಗರ, ಭಗತ್‌ಸಿಂಗ್ ನಗರ, ಸಂಡೂರುರಸ್ತೆ, ವಿದ್ಯಾರಣ್ಯ ನಗರ, ವಿವೇಕಾನಂದ ನಗರ, ಜೋಳದರಾಶಿ ಗುಡ್ಡ, ಸಾಯಿಬಾಬಾ ಸರ್ಕಲ್, ಗೋಕುಲ ನಗರ, ಸೋನಿಯಾ ನಗರ, ಇಂದಿರಾ ನಗರ, ವಂಕಾಯ ಕ್ಯಾಂಪ್, ಜನತಾ ಕಾಲೋನಿ, ರಾಯರಕೆರೆ, ನಿಶಾನಿ ಕ್ಯಾಂಪ್, ಡ್ರೆಸೆಸ್ ಕ್ಯಾಂಪ್, ಪಿ.ಎಲ್.ಸಿ ಏರಿಯಾ, ಟಿಬಿ ಡ್ಯಾಂಏರಿಯಾ, ಎಪಿಎಂಸಿ ಏರಿಯಾ, ಚೆಕ್‌ಪೋಸ್ಟ್‌ಏರಿಯಾ, ಹಂಪಿ ರಸ್ತೆ, ನಾಗೇನಹಳ್ಳಿ ರಸ್ತೆ, ಬಾಲಾ ಟಾಕೀಸ್, ಗೌಳೇರ ಹಟ್ಟಿ, ರಾಣಿಪೇಟೆ, ಕೋರ್ಟ್ ಏರಿಯಾ, ಕೌಲ್‌ಪೇಟೆ, ಪಾವರ್ತಿ ನಗರ, ಆಕಾಶವಾಣಿ, ಮ್ಯಾಸಕೇರಿ, ತಳವಾರ ಕೇರಿ, ಚಿತ್ರಕೇರಿ, ಸಿರಿಸಿನಕಲ್ಲು, ಬಳ್ಳಾರಿ ರಸ್ತೆ, ಅರವಿಂದ ನಗರ, ಬಸ್ ಡಿಪೋಏರಿಯಾ, ಉಕ್ಕಡಕೇರಿ, ಕೆಐಎಡಿಬಿ ಇಂಡಸ್ಟ್ರೀಯಲ್ ಏರಿಯಾ, ಸಂಕ್ಲಾಪುರ, ಎಂ.ಪಿ.ಪಿ ನಗರ, ಸಾಯಿ ಕಾಲೋನಿ, ಅನಂತಶಯನಗುಡಿ, ಜಂಬುನಾಥ ರಸ್ತೆ, ಜಂಬುನಾಥ ಹಳ್ಳಿ, ಸಾಯಿಪೇಟೆ, ಈ ಎಲ್ಲಾ ಏರಿಯಾಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ವಿಶ್ವಏಡ್ಸ್ ದಿನಾಚರಣೆ: ನ.30, ಡಿ.1 ರಂದು ವಿವಿಧ ಕಾರ್ಯಕ್ರಮ

ಹಂಪಿ ಟೈಮ್ಸ್ ಹೊಸಪೇಟೆ

ವಿಶ್ವಏಡ್ಸ್ ದಿನಾಚರಣೆ ಅಂಗವಾಗಿ ಜಿಲ್ಲಾ ಆರೋಗ್ಯ ಮತ್ತುಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾಏಡ್ಸ್ ನಿಯಂತ್ರಣ ಮತ್ತು ನಿರ್ವಹಣಾ ಘಟಕದಿಂದ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ನ.30ರಂದು ಸಂಜೆ 6 ಗಂಟೆಗೆ ಹೊಸಪೇಟೆ ಅಂಬೇಡ್ಕರ್ ಸರ್ಕಲ್ ದಿಂದ ಪುನೀತ್ ರಾಜಕುಮಾರ್ ಸರ್ಕಲ್ ವರೆಗೆ ಮೇಣದ ಬತ್ತಿ ಜಾಥಾ, ಡಿ.1ರಂದು ಬೆಳಿಗ್ಗೆ 9ಕ್ಕೆ ಜಿಲ್ಲಾಆರೋಗ್ಯ ಮತ್ತುಕುಂಟುಂಬ ಕಲ್ಯಾಣಾಧಿಕಾರಿ ಕಚೇರಿ ಆವರಣದಿಂದ ಜಾಗೃತಿ ಜಾಥಾ ಮತ್ತು ಬೆಳಿಗ್ಗೆ 10 ಗಂಟೆಗೆ ಸ್ಟೇಷನ್ ರಸ್ತೆಯ ರೋಟರಿ ಸಭಾಂಗಣದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಂಟುಂಬ ಕಲ್ಯಾಣಾಧಿಕಾರಿ ಡಾ. ಎಲ್.ಆರ್.ಶಂಕರ್ ನಾಯ್ಕ್ ಹಾಗೂ ಜಿಲ್ಲಾಕ್ಷಯರೋಗ ನಿರ್ಮೂಲನಾಧಿಕಾರಿ ಡಾ. ಜಗದೀಶ ಪಾಡ್ನೆ ತಿಳಿಸಿದ್ದಾರೆ.

ರೈತರ ಖಾತೆಗೆ ಪರಿಹಾರ ಬೇಗ

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಭರವಸೆ | ಬಳ್ಳಾರಿ–ವಿಜಯನಗರ ಜಿಲ್ಲೆಗಳ ಕೃಷಿ ಇಲಾಖೆ ಪ್ರಗತಿ ಪರಿಶೀಲನಾ ಸಭೆ

ಇನ್ನೊಂದು ವಾರದೊಳಗೆ ಫ್ರೂಟ್ಸ್ ಐಡಿ ನೋಂದಣಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸಚಿವ ಸೂಚನೆ

ಕೇಂದ್ರ ಅನುದಾನ ನೀಡದಿದ್ದರೂ ರಾಜ್ಯದಿಂದ ಕುಡಿವ ನೀರು, ಮೇವಿನ ನಿರ್ವಹಣೆಗೆ ಈಗಾಗಲೆ ಅನುದಾನ ಬಿಡುಗಡೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಕೇಂದ್ರ ಸರ್ಕಾರಕ್ಕೆ ರಾಜ್ಯದಿಂದ 4 ಲಕ್ಷ ಕೋಟಿ ತೆರಿಗೆ ಹಣ ಪಾವತಿಯಾಗುತ್ತಿದೆ ರಾಜ್ಯದ ಪಾಲು ಕೇವಲ 30 ಸಾವಿರ ಕೋಟಿ ಬರುತ್ತಿದೆ. ನಾವು ಒಕ್ಕೂಟ ವ್ಯವಸ್ಥೆಯಲ್ಲಿ ಇದ್ದೇವೆ. ಬರ ಪರಿಹಾರ ನಮ್ಮ ಹಕ್ಕು, ನ್ಯಾಯ ಸಮ್ಮತವಾಗಿ ನೀಡಬೇಕಿದೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರು ತಿಳಿಸಿದರು

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಬಳ್ಳಾರಿ, ವಿಜಯನಗರ ಜಿಲ್ಲೆಗಳ ಕೃಷಿ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು. ಕೇಂದ್ರ ಸರ್ಕಾರ ಬರ ಪರಿಹಾರ ಅನುದಾನ ಶೀಘ್ರದಲ್ಲೇ ಒದಗಿಸುವ ನಿರೀಕ್ಷೆ ಇದೆ, ಕೇಂದ್ರ ಅನುದಾನ ನೀಡದಿದ್ದರೂ ರಾಜ್ಯ ಸರ್ಕಾರ ಕುಡಿಯುವ ನೀರು, ಮೇವಿನ ನಿರ್ವಹಣೆಗೆ ಈಗಾಗಲೆ ಹಣ ಬಿಡುಗಡೆ ಮಾಡಿದೆ ಹಾಗೇ ರೈತರ ಹಿತವನ್ನು ಕಾಯಲಾಗುತ್ತದೆ ಎಂದರು.

ಪ್ರಿವೆಂಟಿವ್ ಸೋಯಿಂಗ್ ಇನ್ಪೋಕ್ ಹಾಗೂ ಮಧ್ಯಂತರ ಬೆಳೆ ಹಾನಿ ಪರಿಹಾರಕ್ಕೆ ಈಗಾಗಲೇ 343 ಕೊಟಿ ಬಿಡುಗಡೆಯಾಗಿದೆ. ಅದೇ ರೀತಿ ಶೀಘ್ರ ಬರ ಪರಿಹಾರ ಹಣ ಕೂಡ ರೈತರ ಖಾತೆಗೆ ನೇರವಾಗಿ ಸೇರಲಿದೆ ಅದಕ್ಕೆ ಪೂರಕವಾಗಿ ಶೇ.100ರಷ್ಟು ರೈತರ ವಿವರ ಫ್ರೂಟ್ಸ್ ಐಡಿಗೆ ದಾಖಲಿಸುವ, ಕೆ.ವೈ.ಸಿ ನೊಂದಾಯಿಸುವ ಕಾರ್ಯ ಅಭಿಯಾನದ ಸ್ವರೂಪದಲ್ಲಿ ಮಾಡಲಾಗುತ್ತಿದೆ. ರಾಜ್ಯದಲ್ಲಿ ಕೃಷಿ ಹಾಗೂ ಜಲಾನಯನ ಇಲಾಖೆ ಮೂಲಕ 1.43 ಕೊಟಿ ರೈತರಿಗೆ ಒಟ್ಟಾರೆ 5388 ಕೊಟಿ ರೂ. ಸೌಲಭ್ಯ ತಲುಪಿದಂತಾಗುತ್ತದೆ ಎಂದು ಕೃಷಿ ಸಚಿವರಾದ ಎನ್ ಚಲುವರಾಯಸ್ವಾಮಿ ತಿಳಿಸಿದರು.

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ಸೇರಿದಂತೆ ವಿವಿಧ ಯೋಜನೆಗಳ ಮೂಲ 75 ಸಾವಿರ ಕೋಟಿ ಆರ್ಥಿಕ ನೆರವು ರಾಜ್ಯದ ಜನ ಸಾಮಾನ್ಯರಿಗೆ ನೇರವಾಗಿ ತಲುಪುತ್ತಿದೆ, ಇದು ಸಾಮಾಜಿಕ ಸಬಲೀಕರಣ ಸರ್ಕಾರದ ಮೂಲ ಆಶಯ. ಸೂಕ್ಷ್ಮ ನೀರಾವರಿ ಯೋಜನೆಯಡಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ಶೇ.90 ಸಹಾಯಧನದಲ್ಲಿ ಹನಿ ನೀರಾವರಿ ಅಥವಾ ಸ್ಪಿಂಕ್ಲೇರ್ ಸಾಧನ ವಿತರಿಸಲಾಗುತ್ತಿದ್ದು, ಅರ್ಜಿ ಸಲ್ಲಿಸಿದ 48 ಗಂಟೆಗಳಲ್ಲಿ ಮಂಜೂರು ಮಾಡಲಾಗುವುದು. ಈಗಾಗಲೇ ಎಲ್ಲಾ ಅರ್ಹರಿಗೆ ಎಸ್‌ಎಂಎಸ್ ರವಾನಿಸಲಾಗಿದೆ ಎಂದರು.

200 ಕೋಟಿ ರೂಪಾಯಿ ವೆಚ್ಚದಲ್ಲಿ 32,000 ಕೃಷಿ ಹೊಂಡ ನಿರ್ಮಾಣ

■ **ಹಂಪಿ ಟೈಮ್ಸ್ ಬಳ್ಳಾರಿ**

ಕೃಷಿ ಮತ್ತು ಜಲಾನಯನ ಇಲಾಖೆ ಯೋಜನೆಗಳನ್ನು ಕಾಲಮಿತಿಯೊಳಗೆ ಅನುಷ್ಠಾನ ರೈತರ ಆರ್ಥಿಕ ಮಟ್ಟ ಸುಧಾರಣೆಗೆ ಶ್ರಮಿಸಿ ಎಂದು ಕೃಷಿ ಸಚಿವರು ಸೂಚಿಸಿದ್ದಾರೆ. ಬಳ್ಳಾರಿ, ವಿಜಯನಗರ ಜಿಲ್ಲೆಗಳ ಇಲಾಖಾ ಯೋಜನೆಗಳ ಪ್ರಗತಿ ಪರಿಶೀಲಿಸಿದ ಅವರು ಫ್ರೂಟ್ಸ್ ಐಡಿ ನೋಂದಣಿ ಇನ್ನೊಂದು ವಾರದೊಳಗೆ ಪೂರ್ಣಗೊಳಿಸಬೇಕು. ಜಲಸಂರಕ್ಷಣೆ ಯೋಜನೆಗೆ ಆದ್ಯತೆ ನೀಡಿ ಸಿರಿಧಾನ್ಯದ ಬಗ್ಗೆ ಅರಿವು ಮೂಡಿಸಿ ಎಂದರು.

ವಿಮೆ ನೋಂದಣಿ ಹೆಚ್ಚಿಸಲು ಸೂಚನೆ: ಜಿಲ್ಲೆಯಲ್ಲಿ ಬೆಳೆ ವಿಮೆ ನೊಂದಣಿ ತುಂಬಾ ಕಡಿಮೆ ಇದ್ದು, ಇನ್ನು ಮುಂದೆ ಬೆಳೆ ವಿಮೆ ಅನುಕೂಲಗಳ ಬಗ್ಗೆ ಪ್ರತಿ ಗ್ರಾಮದಲ್ಲಿ ಜಾಗೃತಿ ಮೂಡಿಸಿ ನೊಂದಣಿ ಹೆಚ್ಚಿಸಿ ಎಂದರು. ಬೆಳೆ ವಿಮೆ ಸೌಲಭ್ಯ ಕುರಿತು, ಜಿಲ್ಲೆಯ ಎಲ್ಲಾ ತಾಲ್ಲೂಕಿನ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕರಪತ್ರಗಳ ಮೂಲಕ ಸಾಕಷ್ಟು ಪ್ರಚಾರ ನೀಡಬೇಕು ಹಾಗೂ ರೈತರು ಬೆಳೆ ವಿಮೆ ನೋಂದಣಿಗೆ ಮನವೊಲಿಸಬೇಕು. ಇದರಿಂದ, ಬೆಳೆ ಹಾನಿಗೊಳಗಾದಗ ಸರ್ಕಾರದಿಂದ ನೆರವು ಸಿಗಲಿದೆ ಎಂದರು. ರಾಜ್ಯದಲ್ಲಿ ಈ ಬಾರಿ ರೂ.200 ಕೋಟಿ ವೆಚ್ಚದಲ್ಲಿ 32000 ಕೃಷಿ ಹೊಂಡ ನಿರ್ಮಾಣ ಮಾಡಲಾಗುವುದು. ಟೈ ಲ್ಯಾಂಡ್‌ಗಳಲ್ಲಿ ಕೃಷಿ ಹೊಂಡ ನಿರ್ಮಾಣಕ್ಕೆ ಆದ್ಯತೆ ನೀಡಿ, ಅಲ್ಲದೆ ಇಂತಹ ಪ್ರದೇಶಗಳ ರೈತರಿಗೂ ಬೆಳೆ ಪರಿಹಾರ ಒದಗಿಸಲು ಇರುವ ತೊಡಕು ಬಗೆಹರಿಸಿ ಎಂದು ಸಚಿವರು ಸೂಚನೆ ನೀಡಿದರು. ತಪಾಸಣೆ ಹೆಚ್ಚಿಸಿ, ನಕಲಿ ಬೀಜ, ರಸಗೊಬ್ಬರ ಮಾರಾಟದ ಪತ್ತೆ ಹಚ್ಚಿ ಪ್ರಕರಣ ದಾಖಲಿಸಬೇಕು. ಕೃಷಿ ನವೋದ್ಯಮಕ್ಕೆ ಪ್ರೋತ್ಸಾಹ ನೀಡಬೇಕು, ಹಾರ್ವೆಸ್ಟ್ ಹಬ್ ಸ್ಥಾಪನೆಗೂ ಆದ್ಯತೆ ನೀಡಿ ಎಂದರು.

ಕೃಷಿ ಜಂಟಿ ನಿರ್ದೇಶಕ ಕೆ.ಮಲ್ಲಿಕಾರ್ಜುನ ಅವರು ಮಾತನಾಡಿ, ಜಿಲ್ಲೆಯಲ್ಲಿ 382760 ರೈತರ ಪ್ಲಾಟ್‌ಗಳಿದ್ದು, ಇಲ್ಲಿಯವರೆಗೆ 249594 ಪ್ಲಾಟ್‌ಗಳನ್ನು ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಣಿ ಮಾಡಲಾಗಿದ್ದು, ಶೇ.65.21 ಪ್ರಗತಿ ಸಾಧಿಸಲಾಗಿದೆ ಹಾಗೂ 133116 ಫ್ರೂಟ್ಸ್ ಪ್ಲಾಟ್‌ಗಳ ನೋಂದಣಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ ಎಂದು ಹೇಳಿದರು. 2023–24 ನೇ ಸಾಲಿನಲ್ಲಿ ಮುಂಗಾರು ಹಂಗಾಮಿನ ಬೆಳೆ ವಿಮೆ ಯೋಜನೆಯಡಿ 4104 ರೈತರು ನೋಂದಣಿ ಮಾಡಿಸಲಾಗಿದೆ. ಹಿಂಗಾರು ಹಂಗಾಮಿನಲ್ಲಿ ಈಗಾಗಲೇ 1254 ರೈತರು ಬೆಳೆ ವಿಮೆ ನೋಂದಣಿ ಮಾಡಿಸಿದ್ದು, ನೋಂದಣಿ ಪ್ರಕ್ರಿಯೆಯು ಪ್ರಗತಿಯಲ್ಲಿದೆ ಎಂದು ಸಭೆಗೆ ತಿಳಿಸಿದರು.

ಯುವಜನ ಸಬಲೀಕರಣ, ಕ್ರೀಡೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ನಾಗೇಂದ್ರ, ಕಂಪ್ಲಿ ಶಾಸಕ ಜೆ.ಎನ್. ಗಣೇಶ್, ಸಿರುಗುಪ್ಪ ಶಾಸಕ ಬಿ.ಎಂ.ನಾಗರಾಜ, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರಾ, ತಹಶೀಲ್ದಾರ ಗುರುರಾಜ, ಕೃಷಿ ಉಪನಿರ್ದೇಶಕ ಕೆಂಗೇಗೌಡ, ಸಹಾಯಕ ಕೃಷಿ ನಿರ್ದೇಶಕ ದಯಾನಂದ ತಾಲ್ಲೂಕು ಮಟ್ಟದ ಅಧಿಕಾರಿಗಳು, ರೈತರು ಹಾಗೂ ಮತ್ತಿತರರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಕಂದಾಯ, ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗಳ ಸಹಯೋಗದೊಂದಿಗೆ ಫ್ರೂಟ್ಸ್ ತಂತ್ರಾಂಶದಲ್ಲಿ ಪಹಣಿ ಜೋಡಣೆ ಹಾಗೂ ಬೆಳೆ ವಿವೆ ಜಾಗೃತಿ ಮೂಡಿಸುವ ವಾಹನಗಳಿಗೆ ಚಾಲನೆ ನೀಡಲಾಯಿತು.

ಜಿಲ್ಲೆ ಬರ ಪರಿಸ್ಥಿತಿ ವೀಕ್ಷಣೆ

ಬಳ್ಳಾರಿ: ಸಭೆಗೂ ಮುನ್ನ ಎನ್.ಚಲುವನಾರಾಯಣ ಸ್ವಾಮಿ ಅವರು, ಬಳ್ಳಾರಿ ತಾಲ್ಲೂಕಿನ ಹಲಕುಂದಿ ಮತ್ತು ಬೆಳಗಲ್ಲು ಗ್ರಾಮಗಳ ವ್ಯಾಪ್ತಿಯ ಬರದಿಂದ ಹಾನಿಗೊಳಗಾದ ತೊಗರಿ, ಸಜ್ಜೆ, ಸೂರ್ಯಕಾಂತಿ ಬೆಳೆಗಳ ಜಮೀನುಗಳಿಗೆ ಭೇಟಿ ನೀಡಿ ಬೆಳೆ ಹಾನಿಯ ಕುರಿತು ರೈತರು ಹಾಗೂ ಕೃಷಿ ಅಧಿಕಾರಿಗಳಿಂದ ಮಾಹಿತಿ ಪಡೆದರು. ಹಲಕುಂದಿಯ ಮರೀಗೌಡ, ಮಲ್ಲಿಕಾರ್ಜುನ ಹಾಗೂ ಶಿವಪ್ಪ ಎಂಬ ರೈತರ ಸೂರ್ಯಕಾಂತಿ, ತೆ–ಗರಿ ಬೆಳೆ ಜಮೀನುಗಳಿಗೆ ಭೇಟಿ ನೀಡಿ, ಹಾನಿಯಾದ ಬೆಳೆಯನ್ನು ಪರಿಶೀಲಿಸಿದ ಸಚಿವರು, ಬೆಳೆ ವಿಮೆ ಮಾಡಿಸಿಕೊಂಡಿರುವಿರಾ ಎಂದು ವಿಚಾರಿಸಿದರು. ಬೆಳೆ ವಿಮೆ ಮಾಡಿಸಿಕೊಂಡರೆ ಬೆಳೆ ಹಾನಿಯಾದಾಗ ಹಾಗೂ ಬರ ನಷ್ಟ ಹೊಂದಿದಾಗ ಸರ್ಕಾರದಿಂದ ನೆರವು ಸಿಗಲಿದೆ. ಆದ್ದರಿಂದ ಪ್ರತಿಯೊಬ್ಬ ರೈತನು ಬೆಳೆ ವಿಮೆಗೆ ನೋಂದಾಯಿಸಿಕೊಳ್ಳಬೇಕು

ವಿಕಲಚೇತನರ ಸಾಂಸ್ಕೃತಿಕ, ಕ್ರೀಡಾಕೂಟ ಯಶಸ್ವಿ

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಶ್ವ ವಿಕಲಚೇತನರ ದಿನಾಚರಣೆ–2023ರ ಅಂಗವಾಗಿ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ಸೋಮವಾರ ಹೊಸಪೇಟೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ಜಿಲ್ಲೆಯ ವಿಕಲಚೇತನರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು ಯಶಸ್ವಿಯಾಗಿ ಜರುಗಿತು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಅವರು ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಿಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ನಗರಸಭೆ ಉಪಾಧ್ಯಕ್ಷರೂ ಪೇಶ ಕುಮಾರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕಿ ಎಸ್.ಶ್ವೇತಾ, ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಎಂ.ಉಮೇಶ್, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕೃಷ್ಣ ಸಾಎಲ್ ಬಾಕಳೆ ಉಪಸ್ಥಿತರಿದ್ದರು.

ಕ್ರೀಡಾಕೂಟದಲ್ಲಿ ವಿವಿಧ ರೀತಿಯ ವಿಕಲಚೇತನರಿಗೆ ಒಟ್ಟು 19 ವಿಭಾಗಗಳಲ್ಲಿ ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಿದ್ದು, ಈ ಸ್ಪರ್ಧೆಗಳಲ್ಲಿ ಜಿಲ್ಲೆಯ ಆರು ತಾಲ್ಲೂಕುಗಳಿಂದ ಸುಮಾರು 630ಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗವಹಿಸಿದ್ದರು. ಅಲ್ಲದೆ ವಿವಿಧ ವಿಕಲಚೇತನ ಶಾಲೆಗಳು ಮಕ್ಕಳು ಹೆಚ್ಚು ಕ್ರೀಡಾಸ್ಫೂರ್ತಿಯಿಂದ ಭಾಗವಹಿಸಿದ್ದು ವಿಷೇಶವಾಗಿತ್ತು.

ವೈಯಕ್ತಿಕ ಕ್ರೀಡೆಗಳಲ್ಲಿ ಗುಂಡುಎಸೆತ, ಜಾವಲಿನ್ ಥ್ರೋ, ಬಗಲುಗೋಲು ಓಟ, ವೈಟ್‌ಕೇನ್, 100 ಮೀಟರ್‌ಓಟ, ಮ್ಯೂಜಿಕಲ್‌ಚೇರ್, ಚೆಂಡುಎಸೆತ, ಗುಂಪು ಕ್ರೀಡೆಗಳಲ್ಲಿ ಸಿಟ್ಟಿಂಗ್ &ಸ್ಟ್ಯಾಂಡಿಂಗ್‌ಕ್ರಿಕೆಟ್, ಕಬಡ್ಡಿ ಸ್ಪರ್ಧೆಗಳು ಹಾಗೂ ಜಾನಪದಗೀತೆ, ಭಾವಗೀತೆ, ಚಿತ್ರಕಲಾ ಸ್ಪರ್ಧೆ, ಫ್ಯಾನ್ಸಿಡ್ರೆಸ್ (ವೇಷ ಭೂಷಣ) ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

ಈ ಕ್ರೀಡಾಕೂಟಕ್ಕೆ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ 25 ದೈಹಿಕ ಮತ್ತು ಸಾಂಸ್ಕೃತಿಕ ಕಲೆಗಳ ಶಿಕ್ಷಕರನ್ನು ನಿಯೋಜಿಸಲಾಗಿತ್ತು. ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ಸರ್ಕಾರಿ ಶಾಲೆಯಲ್ಲಿನ ವಿಕಲಚೇತನ ಮಕ್ಕಳನ್ನು ಕರೆದುಕೊಂಡು ಬಂದು ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಅನುವು ಮಾಡಿಕೊಡಲಾಯಿತು.

ಇಲಾಖೆಯಲ್ಲಿ ಕಾರ್ಯನಿರ್ವಾಹಿಸುತ್ತಿರುವ ಎಲ್ಲಾ ತಾಲ್ಲೂಕಿನ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರು, ಗ್ರಾಮೀಣ ಮತ್ತು ನಗರ ಪುನರ್ವಸತಿ ಕಾರ್ಯಕರ್ತರು, ಅಲ್ಲದೆ ಜಿಲ್ಲೆಯ ವಿಕಲಚೇತನರಿಗಾಗಿ ಶ್ರಮಿಸುತ್ತಿರುವ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಶಿಕ್ಷಕರು, ಪೋಷಕರು ಪಾಲ್ಗೊಂಡಿದ್ದರು.

ವಚನ ಅರಿವು

ಹಿಡಿದು ಬಿಡಬಾರದು

ತೊಳೆದಡೆ ಮಡಿ, ಮಾಸಿದಡೆ ಮೈಲಿಗೆ.
ಅರಿದಡೆ ತಾನು, ಮರದಡೆ ಜಗದೊಳಗೆಂಬುದನರಿ.
ಹಿಡಿದು ಬಿಟ್ಟೊಡನೆ ಕೈಮೀರಿದಡೆ,
ಮತ್ತೆ ಮರುಗಿದಡಿಲ್ಲ, ಜಾಂಬೇಶ್ವರಾ.

– ರಾಯಸದ ಮಂಚಣ್ಣ

ಪತ್ರಗಳನ್ನು ರವಾನಿಸುವ ಕಾಯಕ ಮಾಡುತ್ತಿದ್ದ ಶರಣ ರಾಯಸದ ಮಂಚಣ್ಣ. ಅರಿವಿನಲ್ಲಿ ಬದುಕುವುದು ಶರಣರ ಮುಖ್ಯ ನಿಲುವು. ಅದು ಸಾಧನೆಯ ದಾರಿ. ನಮಗೆ ಅರಿವು ಬರಬೇಕೆಂದರೆ ನಾವು ಹೇಗೆ ಬದುಕಬೇಕೆಂಬುದನ್ನು ತಿಳಿದುಕೊಳ್ಳಬೇಕು. ಬರಿ ತಿಳಿದುಕೊಂಡರಷ್ಟೆ ಸಾಲದು. ಅದರಂತೆ ನಡೆಯುವುದು ಕೂಡ ಮುಖ್ಯವಾದುದು. ಯಾವುದನ್ನಾಗಲಿ ತೊಳೆದರೆ ಮಡಿಯಾಗುತ್ತದೆ. ಹೊಲಸಾದರೆ ಮೈಲಿಗೆಯಾಗುತ್ತದೆ. ಹಾಗಾದರೆ ತೊಳೆಯಬೇಕಾದದ್ದು ಯಾವುದನ್ನು?ಮೈಲಿಗೆಯಾಗಿರುವುದು ಯಾವುದು? ಮೈಲಿಗೆ ಎಂದರೆ ಅಜ್ಞಾನ. ಮನಸ್ಸಿನಲ್ಲಿ ಹುಸಿತನವನ್ನು ತುಂಬಿಕೊಂಡು, ಮೋಹಾದಿ ಬಯಕೆಗಳಿಂದ ನಾವು ಅರಿವು ತಪ್ಪಿ ನಡೆಯಬಾರದು. ಅಜ್ಞಾನವನ್ನು ಜ್ಞಾನದಿಂದ ತೊಳೆದು ಮೈಲಿಗೆ ಕಳೆದು ಮಡಿಯಾಗಬೇಕಾಗುತ್ತದೆ. ಮಡಿಯಾದರೆ ಅರಿವಿನಿಂದ ಆನುಭಾವಿಯಾಗುತ್ತಾನೆ. ದಾರಿ ತಪ್ಪಿದರೆ ಲೋಕದ ಹುಸಿ ಜಂಜಾಟದಲ್ಲಿ ಮುಳುಗುವುದು ನಿಶ್ಚಿತ. ಒಂದು ವೇಳೆ ಅರಿವಿನ ಪಥ ಹಿಡಿದು, ಮತ್ತೆ ಬಿಟ್ಟರೆ ಮರುಗಬೇಕಾಗುತ್ತದೆ. ಕಾಲದ ಮುಂದೆ ಪಶ್ಚಾತ್ತಾಪ ಪಟ್ಟು ಕೊರಗಿದರೆ ಸಮಯ ಮೀರಿಬಿಟ್ಟಿರುತ್ತದೆ. ಹಾಗಾಗಿ ಮನಕ್ಕೆ ಮರವು ಬರದಂತೆ ಹಿಡಿಯುವುದೇ ಜೀವನ ವಿಧಾನವಾಗಬೇಕು

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಪ್ರವಾಸ

ಹಂಪಿ ಟೈಮ್ಸ್ ಕೊಪ್ಪಳ

ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ತಂಗಡಗಿ ಅವರು ನ.30ರಿಂದ ಎರಡು ದಿನಗಳ ಕಾಲ ಕೊಪ್ಪಳ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ. ನ.30ರಂದು ರಾತ್ರಿ 7 ಗಂಟೆಗೆ ಬೆಂಗಳೂರಿನಿಂದ ರಸ್ತೆ ಮಾರ್ಗವಾಗಿ ಹೊರಟು ರಾತ್ರಿ 12 ಗಂಟೆಗೆ ಕೊಪ್ಪಳ ನಗರಕ್ಕೆ ಆಗಮಿಸಿ ವಾಸ್ತವ್ಯ ಮಾಡುವರು. ಡಿಸೆಂಬರ್ 1ರಂದು ಬೆಳಗ್ಗೆ 9.15ಕ್ಕೆ ಕೊಪ್ಪಳ ನಗರದಿಂದ ನಿರ್ಗಮಿಸಿ ಬೆಳಗ್ಗೆ 10 ಗಂಟೆಗೆ ಕುಷ್ಟಗಿ ಪಟ್ಟಣಕ್ಕೆ ತೆರಳಿ ಅಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿ ಆಡಿಟೋರಿಯಂ ಹಾಲನಲ್ಲಿ ನಡೆಯುವ ಜನತಾ ದರ್ಶನ ಕಾರ್ಯಕ್ರಮದಲ್ಲಿ ಭಾಗಿಯಾಗುವರು. ನಂತರ ಸಂಜೆ 6 ಗಂಟೆಗೆ ಕುಷ್ಟಗಿಯಿಂದ ನಿರ್ಗಮಿಸಿ ರಾತ್ರಿ 7 ಗಂಟೆಗೆ ಕಾರಟಗಿಗೆ ತೆರಳಿ ಸಾರ್ವಜನಿಕ ಭೇಟಿ ಮತ್ತು ಕುಂದುಕೊರತೆಗಳ ವಿಚಾರಣೆ ಮಾಡುವರು. ಬಳಿಕಕ ಅಲ್ಲಿಯೇ ವಾಸ್ತವ್ಯ ಮಾಡುವರು ಎಂದು ಸಚಿವರ ಆಪ್ತಕಾರ್ಯದರ್ಶಿ ತಿಳಿಸಿದ್ದಾರೆ.

ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ-ಮೇಲ್:hampitimes@gmail.com

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

ತಲ್ಲಣಿಸದಿರು ಕಂಡ್ಯ ತಾಳು ಮನವೇ



ಭಕ್ತ ಕನಕದಾಸರು ಕರ್ನಾಟಕದಲ್ಲಿ 15–16 ನೆಯ ಶತಮಾನಗಳಲ್ಲಿ ಜನಪ್ರಿಯವಾದ ಭಕ್ತಿ ಪಂಥದ ಮುಖ್ಯ ಹರಿದಾಸರಲ್ಲಿ ಒಬ್ಬರು. ಹಾಗೆಯೇ ಕನ್ನಡ ಭಾಷೆಯ ಪ್ರಸಿದ್ಧ ಕೀರ್ತನಕಾರರು. ಕನಕದಾಸರು ಮತ್ತು ಪುರಂದರದಾಸರನ್ನು ಕರ್ನಾಟಕ ಕೀರ್ತನ ಸಾಹಿತ್ಯದ ಅಶ್ವಿನಿ ದೇವತೆಗಳೆಂದು ಬಣ್ಣಿಸಲಾಗಿದೆ. ಕನಕದಾಸರು ಶ್ರೀ ವ್ಯಾಸರಾಯರ ಮೆಚ್ಚಿನ ಶಿಷ್ಯರು ವ್ಯಾಸರಾಯರಿಂದ ಮಧ್ವ ತತ್ವಶಾಸ್ತ್ರವನ್ನು ಕಲಿತು ಒಪ್ಪಿಕೊಂಡ ಕನಕದಾಸರು ಉಡುಪಿ ಶ್ರೀ ಕೃಷ್ಣನ ಅನನ್ಯ ಭಕ್ತರಾಗಿದ್ದರು . ಕಾಗಿನೆಲೆಯ ಆದಿಕೇಶವನ ಭಕ್ತರಾದ ಕನಕದಾಸರು ಜಾತಿಪದ್ಧತಿಯ ತಾರತಮ್ಯಗಳನ್ನು ಅಲ್ಲಗಳೆದರು. ಕನಕದಾಸರ ಅತ್ಯಂತ ಜನಪ್ರಿಯ ಪದ್ಯಗಳಲ್ಲಿ ತಲ್ಲಣಿಸದಿರು ಕಂಡ್ಯ ತಾಳು ಮನವೇ ' ಸಹ ಒಂದಾಗಿದ್ದು, ಇದರಲ್ಲಿ ನಮಗೆ ಭಗವಂತನ ಬಗೆಗೆ ಹಾಗೂ ಆತನ ಅಸ್ತಿತ್ವದ ಕುರಿತು ಅಪಾರವಾದ ಶ್ರದ್ಧೆ , ನಂಬಿಕೆ ಇರಬೇಕು ಎಂಬುದನ್ನು ಬಹಳ ಒತ್ತುಕೊಟ್ಟು ಹೇಳಿದ್ದಾರೆ. ಏಕೆಂದರೆ ನಂಬಿಕೆ ಎನ್ನುವುದು ಕೇವಲ ಒಂದು 'ಪದ' ಅಥವಾ ಭಾವವಲ್ಲ, ಅದೊಂದು ಕ್ರಿಯಾತ್ಮಕ ಶಕ್ತಿ. ಅದು ನಮ್ಮೆಲ್ಲ ಕ್ರಿಯೆಗಳಲ್ಲಿ, ಚಟುವಟಿಕೆಗಳಲ್ಲಿ ಧನಾತ್ಮಕವಾಗಿ ಕೆಲಸ ಮಾಡುತ್ತಿರುತ್ತದೆ. ಅದೇ ಒಂದು ಅತ್ಯದ್ಭುತ ಶಕ್ತಿ. ಅತ್ಯಂತ ಸಂಕೀರ್ಣಮಯವಾದ ಈ ಬದುಕಿನಲ್ಲಿ ನಮ್ಮ ನಿತ್ಯ ಜೀವನವು ಬಹಳ ಏರಿಳಿತಗಳಿಂದ, ಕಷ್ಟಕಾರ್ಪಣ್ಯಗಳಿಂದ, ಸಮಸ್ಯೆಗಳಿಂದ ಕೂಡಿರುತ್ತದೆ. ಈ ಕಾರಣಕ್ಕಾಗಿಯೇ ನಮ್ಮ ಮನಸ್ಸು,ಹೃದಯಗಳಲ್ಲಿ ತಲ್ಲಣ ಸೃಷ್ಟಿಯಾಗಿರುತ್ತದೆ. ಮನಸಸ್ಸು ತನ್ನ ಸಮತೋಲವನ್ನು ಕಳೆದುಕೊಂಡಿರುತ್ತದೆ. ಇದೇ ನಮ್ಮ ಬದುಕಿನಲ್ಲಿ ಅಶಾಂತಿಗೆ ಕಾರಣವಾಗುತ್ತದೆ. ಶಾಂತಿಯೇ ಬದುಕಿನ ಉದ್ದೇಶವಾಗಿರುವಾಗ ಬೇರೆ ಬೇರೆ ಉದಾಹರಣೆಗಳ ಮೂಲಕ ನಾವು ಭಗವಂತನಲ್ಲಿ ಹೇಗೆ ನಿಷ್ಠರಾಗಿರಬೇಕೆಂಬುದನ್ನು ಕನಕದಾಸರು ಈ ರೀತಿ ಹೇಳುತ್ತಾರೆ.

ಬೆಟ್ಟದ ತುದಿಯಲ್ಲಿರುವ ವೃಕ್ಷಕ್ಕೆ ಯಾರು ಸಹ ಕಟ್ಟೆ ಕಟ್ಟಿ ನೀರೆರೆಯಲು ಸಾಧ್ಯವಿಲ್ಲ. ಆದಾಗ್ಯೂ ಅಲ್ಲಿ ವೃಕ್ಷ, ಮರ ಗಿಡಗಳು ಸಮೃದ್ಧವಾಗಿ ಬೆಳೆದಿರುತ್ತವೆ. ಅಂದರೆ ಇಲ್ಲಿ ಸ್ವಾಮಿ ಎಲ್ಲದಕ್ಕೂ ಹೊಣೆಗಾರನಾಗಿದ್ದಾನೆ, ಜೊತೆಗೆ ಅಸ್ತಿತ್ವವು ತನ್ನ ಸೃಷ್ಟಿಯ ಬಗೆಗೆ ಎಷ್ಟು ಜವಾಬ್ದಾರಿಯುತವಾಗಿದೆ ಎಂಬುದು ತಿಳಿದುಬರುತ್ತದೆ. ಈ ರಹಸ್ಯವೇ ನಮಗೆ ಅರ್ಥವಾಗದುದರಿಂದ ನಾವು ನಿತ್ಯ ಜೀವನದಲ್ಲಿ ಸದಾ ಚಿಂತಾಕ್ರಾಂತರಾಗಿರುತ್ತೇವೆ.ಹೇಗೆ ತಾಯಿ ತನ್ನ ಮಗುವಿಗೆ ಆಹಾರ ನೀಡಿ ಪೋಷಿಸುತ್ತಾಳೋ ಅದೇ ರೀತಿ ಭಗವಂತನು ಎಲ್ಲ ಚರಾಚರ ಜೀವಿಗಳಿಗೆ ತಾಯಿಯ ಸ್ವರೂಪದಲ್ಲಿ ಬಂದು ಸಲಹಿ ,ರಕ್ಷಿಸುತ್ತಾನೆ. ಇಲ್ಲಿ ಅಸ್ತಿತ್ವವು ಎಷ್ಟು ಕರುಣಾಮಯಿ ಎಂಬುದು ನಮ್ಮ ಹೃದಯದ ಅನುಭವಕ್ಕೆ ಬರುತ್ತದೆ. ಅದೇ ರೀತಿಯಲ್ಲಿ ನಿಸರ್ಗದ ಸೌಂದರ್ಯಕ್ಕೆ ಯಾವುದು ಸಹ ಸರಿಸಾಟಿಯಿಲ್ಲವೆಂದು ನವಿಲು ,ಲತೆ ಸವಿಮಾತಿನ ಗಿಳಿಗಳ ಮೂಲಕ ಉದಾಹರಿಸುತ್ತಾರೆ. ಏಕೆಂದರೆ ಜಗತ್ತಿನ ಯಾವುದೇ ಶ್ರೇಷ್ಠ ವಿಜ್ಞಾನಿ,ಕವಿಗಳು ಇವಾವನ್ನು ಸೃಷ್ಟಿಸಲಾರರು. ಇದೇ ಮಾನವ ಶಕ್ತಿಯ ಒಂದು ಮಿತಿಯಾಗಿದೆ. ಪದ್ಯದ ಕೊನೆಯ ಸಾಲುಗಳಲ್ಲಿ ಕಲ್ಲಿನಲ್ಲಿ ಹುಟ್ಟಿದ ಕಪ್ಪೆಯು ತನ್ನ ಆಹಾರವನ್ನು ಹೇಗೆ ಪಡೆಯುತ್ತದೆ ಎಂಬುದನ್ನು ಬಹಳ ಸೂಚ್ಯವಾಗಿ ಹೇಳಿದ್ದಾರೆ. ಆದ್ದರಿಂದಲೇ ಶ್ರೀ ಕನಕದಾಸರು ಸಮರ್ಪಣಾ ಭಾವದ ಶ್ರದ್ಧೆ,ನಿಷ್ಠೆಯ ಮಹತ್ವವನ್ನು ಸಾರಿ ಹೇಳಿದ್ದಾರೆ.ಇದನ್ನೇ ಮಹಾನ್ ದಾರ್ಶನಿಕ ಓಶೋ ರಜನಿಶ್ ರವರು ತಮ್ಮದೇ ಶೈಲಿಯಲ್ಲಿ ಈ ರೀತಿ ಹೇಳುತ್ತಾರೆ "ನನ್ನ ಪ್ರಕಾರ ಅಸ್ತಿತ್ವಕ್ಕೆ ಸಾವಿಲ್ಲ. ಅದು ಜೀವಂತವಾಗಿದೆ, ಪ್ರೀತಿ, ಕರುಣೆ, ಪ್ರಜ್ಞೆ, ಆತ್ಮಸಾಕ್ಷಿಯಿಂದ ಮಿಡಿಯುತ್ತಿದೆ; ಅದು ನಮಗೆ ಅತ್ಯಂತ ನಿಕಟವಾಗಿದೆ. ಅಸ್ತಿತ್ವದೊಂದಿಗೆ ಸಂಭಾಷಿಸುವ ಮತ್ತು ಪ್ರತಿಕ್ರಿಯೆಯನ್ನು ಪಡೆಯುವ ಸಾಧ್ಯತೆಯಿದೆ. ನಾವು "ದೇವರು" ಎಂದು ಹೇಳಿದಾಗ ಅಸ್ತಿತ್ವವು ನಮ್ಮದೇ ಭಾಷೆಯಲ್ಲಿ ಸಂಭಾಷಣೆಯ ಸಾಧ್ಯತೆಯನ್ನು ಸಹ ಅನುಮತಿಸುತ್ತದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ನೀವು ಅದರೊಂದಿಗೆ ಸಂವಾದ ನಡೆಸಬಹುದು; ನೀವು ಅದನ್ನು "ನೀನು" ಎಂದು ಕರೆಯಬಹುದು ಮತ್ತು ಹಾಗೆ ಕರೆಯುವುದರಿಂದ ಅದು ಅರ್ಥಹೀನವಾಗುವುದಿಲ್ಲ. ಏಕೆಂದರೆ ಭಗವಂತನ ಅಸ್ತಿತ್ವವು ಸತ್ತ ಬಂಡೆಯಂತಲ್ಲ; ಅದು ಜೀವಂತ ಹೂವು. ಅದು ನಿಮಗೆ ಪ್ರತಿಕ್ರಿಯಿಸುತ್ತದೆ. ಹೇಗೆಂದರೆ ನೀವು ಅದನ್ನು ಪ್ರೀತಿಸಿದರೆ,ಆ ಪ್ರೀತಿ ಮರಳಿ ನಿಮ್ಮ ಕಡೆಗೆ ಹರಿಯುತ್ತದೆ. ನೀವು ಅದರ ಕಡೆಗೆ ಚಲಿಸಿದರೆ, ಅದು ನಿಮ್ಮ ಕಡೆಗೆ ಚಲಿಸುತ್ತದೆ. ನೀವು ಅದನ್ನು ಹುಡುಕಿದರೆ, ಅದು ನಿಮ್ಮನ್ನು ಹುಡುಕುತ್ತದೆ. ಅಸ್ತಿತ್ವವು ನಿಮ್ಮ ಬಗೆಗೆ ತಾತ್ಸಾರ ಅಥವಾ ಉಪೇಕ್ಷೆಯ ಭಾವದಿಂದ ಇಲ್ಲ. ನೀವು ಅಸ್ತಿತ್ವವನ್ನು ಪ್ರೀತಿಸುತ್ತಿದ್ದರೆ, ಅಸ್ತಿತ್ವವು ನಿಮ್ಮೊಂದಿಗೆ ಪ್ರೀತಿಯಲ್ಲಿದೆ. ನಾವು ಅಸ್ತಿತ್ವವನ್ನು ದೈವಿಕ ಅಥವಾ ದೇವರು ಎಂದು ಕರೆಯುವಾಗ ನಾವು ಅದನ್ನು ಅರ್ಥೈಸಿಕೊಳ್ಳುವುದು ಇಷ್ಟೇ ಆಗಿದೆ". ಇದರಿಂದ ನಮಗೆ ಸ್ಪಷ್ಟವಾಗುವುದೇನೆಂದರೆ ಅಸ್ತಿತ್ವವು ಸದಾ ಪ್ರೇಮದಿಂದ ಕೂಡಿದೆ. ಅದು ತನ್ನ ಮಾತೃವಾತ್ಸಲ್ಯದಿಂದ ಎಲ್ಲರನ್ನು ಪೋಷಿಸಿ ಸಲಹುತ್ತದೆ. ಈ ಸತ್ಯವು ನಮಗೆ ಅರ್ಥವಾಗದೆ ಹೋಗುವುದರಿಂದ ನಾವು ಎಲ್ಲವನ್ನು ನಮ್ಮ ಸ್ವಂತ ದೃಷ್ಟಿಕೋನದಲ್ಲಿಯೇ ನೋಡುತ್ತೇವೆ, ಗ್ರಹಿಸುತ್ತೇವೆ ಮತ್ತು ತೀರ್ಮಾನಿಸುತ್ತೇವೆ. ಎಲ್ಲ ಕಾರ್ಯ ಚಟುವಟಿಕೆಗಳಲ್ಲಿ ನಾನೇ ಅತ್ಯಂತ ಪ್ರಮುಖ ವ್ಯಕ್ತಿ ಎಂದು ಭಾವಿಸುತ್ತೇವೆ. ಆದರೆ ಎಲ್ಲರಂತೆ ನನ್ನದೂ ಒಂದು ಪಾತ್ರ ಎಂಬುದನ್ನು ಮರೆತೇ ಬಿಡುತ್ತೇವೆ. ಎಲ್ಲಕ್ಕಿಂತ ಮುಖ್ಯವಾಗಿ ನಮ್ಮೆಲ್ಲ ಚಟುವಟಿಕೆಗಳು ಅಹಂ ಕೇಂದ್ರಿತವಾಗಿರುತ್ತವೆ. ಇದೇ ನಮ್ಮ ವಿಕಾಸ ಪ್ರಕ್ರಿಯೆಗೆ ಬಹುದೊಡ್ಡ ಅಡೆತಡೆಯಾಗಿ ಭಗವಂತನೊಂದಿಗಿನ ನಮ್ಮ ಸಂಬಂಧವನ್ನು ಕಡಿದು ಹಾಕುತ್ತದೆ. ಪ್ರಸ್ತುತ ಜಗತ್ತಿನಲ್ಲಿ ಒತ್ತಡ, ಖಿನ್ನತೆ, ಆತಂಕ ಮುಂತಾದ ಮಾನಸಿಕ ಸಮಸ್ಯೆಗಳಿಂದ ಬಹು ಸಂಖ್ಯಾತ ಜನರು ಬಳಲುತ್ತಿದ್ದಾರೆ. ಆದರೆ ಭಗವಂತ ಅಥವಾ ಆತನ ಅಸ್ತಿತ್ವದ ಮೇಲಿನ ನಮ್ಮ ಅಚಲವಾದ ನಂಬಿಕೆ ಮತ್ತು ಶ್ರದ್ಧೆ ನಮ್ಮನ್ನು ಎಲ್ಲ ಬಗೆಯ ಮಾನಸಿಕ ಸಮಸ್ಯೆ ಅಥವಾ ಕಾಯಿಲೆಗಳಿಂದ ದೂರ ಮಾಡವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇದರಿಂದ ನಾವು ನಮ್ಮ ಆಂತರಿಕ ಜಗತ್ತಿನ ಜೊತೆಗೆ ಬಾಹ್ಯ ಜಗತ್ತಿನೊಂದಿಗೂ ಸಹ ಸಾಮರಸ್ಯವನ್ನು ಸಾಧಿಸಬಹುದಾಗಿದೆ. ಈ ನಂಬಿಕೆಯೇ ನಮ್ಮ ಮತ್ತು ಭಗವಂತನ ಮಧ್ಯೆ ಒಂದು ಸೇತುವೆಯಾಗಿ ಕೆಲಸ ಮಾಡುತ್ತದೆ. ಅಲ್ಲದೆ ನಮ್ಮನ್ನು ಮಾನಸಿಕ ತೊಳಲಾಟದಿಂದ ಮುಕ್ತ ಮಾಡುತ್ತದೆ. ಇದೇ ಆಶಯದೊಂದಿಗೆ ದಾಸ ಶ್ರೇಷ್ಠ, ಭಕ್ತ ಶ್ರೀ ಕನಕದಾಸರು ತಮ್ಮ ಪದ್ಯದ ಮೂಲಕ ನಮ್ಮನ್ನು ಎಚ್ಚರಿಸಿದ್ದಾರೆ.

ಗುರು ಹಿರೇಮಠ,
ಹಗರಿಬೊಮ್ಮನಹಳ್ಳಿ

ಮಕ್ಕಳ ದತ್ತು ಸ್ವೀಕಾರ ವಿಶ್ವವ್ಯಾಪಿ

ಬಲಿಷ್ಠ ಮತ್ತು ಕ್ರಿಯಾಶೀಲ ಭಾರತ ನಿರ್ಮಾಣವಾಗಲು ಮಕ್ಕಳೇ ಅಡಿಪಾಯ ಮಕ್ಕಳು ರಾಷ್ಟ್ರಗಳ ಅತ್ಯುನ್ನತ ಆಸ್ತಿ ಮತ್ತು ರಾಷ್ಟ್ರದ ಭವಿಷ್ಯವನ್ನು ನಿರ್ಧರಿಸುತ್ತಾರೆ. ಇಂದಿನ ಮಕ್ಕಳೇ ಇಂದಿನ ಪ್ರಜೆಗಳು ಹಾಗಾಗಿ ಪ್ರತಿಯೊಂದು ಮಗುವು ಹುಟ್ಟುತ್ತಲೇ ವಿಶ್ವಮಾನವ ಬೆಳೆಯುತ್ತ ನಾವು ಅದನ್ನು ಅಲ್ಪಮಾನವನನ್ನಾಗಿ ಮಾಡುತ್ತೇವೆ ಮತ್ತೆ ಅವರನ್ನು ವಿಶ್ವಮಾನವನನ್ನಾಗಿ ಮಾಡಬೇಕು ಎನ್ನುವುದು ರಾಷ್ಟ್ರಕವಿ ಕುವೆಂಪುರವರ ಆಶಯ ಕೂಡ. ಹಾಗಾಗಿ ಅವರನ್ನು ನೈತಿಕ ವ್ಯಕ್ತಿತ್ವದಿಂದ ಮುಖ್ಯನನ್ನಾಗಿಸುವಲ್ಲಿ ಕುಟುಂಬದ ಪಾತ್ರ ಬಹುಮುಖ್ಯವಾದದ್ದು. ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಕುಟುಂಬದ ಪ್ರೀತಿ ಮತ್ತು ವಾತ್ಸಲ್ಯವು ಅತ್ಯಂತ ಮಹತ್ವವಾದದ್ದು, ಮಕ್ಕಳು ಕುಟುಂಬದಲ್ಲಿ ಎಲ್ಲಾ ಸದಸ್ಯರೊಂದಿಗೆ ಭಾಂದವ್ಯ ಬೆಸೆಯಲು ಅವಕಾಶವಿರುತ್ತದೆ. ಆದರೆ ಕೆಲವೊಮ್ಮೆ ದುರುದೃಷ್ಟಕರ ಘಟನೆಗಳಿಂದ ಮಕ್ಕಳು ಅನಾಥರಾಗುತ್ತಾರೆ, ಪೋಷಕರಿಂದ ಪರಿತ್ಯಕ್ತ ಹಾಗೂ ನಿರ್ಲಕ್ಷ್ಯಕ್ಕೆ ಒಳಗಾಗುತ್ತಾರೆ. ತಮ್ಮದಲ್ಲದ ತಪ್ಪಿಗೆ ಅವರಿಗೆ ಸೂಕ್ತ ಬೆಂಬಲ ಹಾಗೂ ಮಾರ್ಗದರ್ಶನವಿಲ್ಲದೇ ಕುಟುಂಬದಿಂದ ದೂರ ಉಳಿದು ಅನೇಕ ರೀತಿಯ ತೊಂದರೆ ದೌರ್ಜನ್ಯಕ್ಕೆ ಒಳಗಾಗಿ ಅವರ ಬಾಲ್ಯಾವಸ್ಥೆಯನ್ನು ಮತ್ತು ಮಕ್ಕಳ ಹಕ್ಕುಗಳನ್ನು ಅನುಭವಿಸದೇ ಕಮರಿಹೋಗುತ್ತಿವೆ. ಜನಿಸಿದ ಪ್ರತಿಯೊಂದು ಮಗುವು ಕುಟುಂಬದ ವಾತಾವರಣದಲ್ಲಿ ಬೆಳೆಯಬೇಕು, ಅದು ಅವರ ಹಕ್ಕು, ಅವರಿಗೆ ಅವಶ್ಯವಿರುವ ಪ್ರೀತಿ ಮತ್ತು ಆರೈಕೆಯನ್ನು ಕುಟುಂಬದ ವಾತವರಣವು ಕಲ್ಪಿಸಬೇಕು. ಈ ನಿಟ್ಟಿನಲ್ಲಿ ಜೈವಿಕ ಪೋಷಕರಿಂದ ದೂರ ಉಳಿದ ಮಕ್ಕಳು, ಅನಾಥ ಹಾಗೂ ಪರಿತ್ಯಕ್ತ ಮಕ್ಕಳಿಗೆ ದತ್ತು ಇರಿಸುವುದರ ಮೂಲಕ ಮಕ್ಕಳ ಬೆಳವಣಿಗೆಗೆ ಚಿಕ್ಕಂದಿನಿಂದಲೇ ಕುಟುಂಬದ ಜೀವನದ ಸುಭದ್ರತೆಯನ್ನೊದಗಿಸುವು ದಾಗಿದೆ.

ದತ್ತು ಸ್ವೀಕಾರ ಸಾರ್ವತ್ರಿಕವಾಗಿ ಜಾರಿಯಲ್ಲಿರುವ ಪದ್ದತಿಯಾಗಿದ್ದು, ಇದು ವಿಶ್ವವ್ಯಾಪಿಯಾಗಿದೆ. ಅಲ್ಲದೇ ಅತ್ಯಂತ ಪ್ರಾಚೀನ ಕಾಲದಿಂದಲೂ ದತ್ತು ಸ್ವೀಕಾರ ಇತ್ತೆಂಬುವುದಕ್ಕೆ ಅನೇಕ ಆಧಾರಗಳಿವೆ. ಆದರೆ ಪ್ರಾಚೀನ ಕಾಲದಲ್ಲಿ ದತ್ತು ಸ್ವೀಕಾರದ ಉದ್ದೇಶಗಳು ಈಗ ಇರುವುದಕ್ಕಿಂತ ಭಿನ್ನವಾಗಿವೆ, ಕುಟುಂಬದ

ಕವಿ ಮನಸು

ಕನಕ ನಿನ್ನನರಿಯದೇ...

ಮನುಜ ಕುಲಕಿತ್ತ ಬುತ್ತಿಯ
ಬಿಚ್ಚಿ ಉಣ್ಣಲರಿಯದೆ
ಜಾತಿ ಬೀಜ ಹುಡುಕಿ
ಮತದ ಕಟ್ಟೆ ಕಟ್ಟಿ
ಜಾತಿ,ಮತದ ಬೆಳೆ ತೆಗೆವರ
ಕಂಡು ಕರುಬದಿರು ಕನಕ

ಅರಿವಿನಾಲಯದಿ ನಿಂದು
ಕುಲದ ನೆಲೆಯನರಸುವ
ಪಾಮರನೆತ್ತ ಅರಿಯನು.
ಬಯಲಿಗಾವ ಕುಲ ಕನಕ

ಜ್ಞಾನ ಜ್ವಾಲೆ ಉರಿಯುತಿರಲು
ಅದಮನೊಬ್ಬ ಬೆಳಕಿನ ಕಿಡಿಯ
ಅರಸುವುದ ಕಂಡ್ಯ ಕನಕ

ಕನಕನ ರೊಟ್ಟಿಗೆ ಗೋಪಾಲನ ಬೆಣ್ಣೆ
ರೊಟ್ಟಿ ಬೆಣ್ಣೆಯ ಹದವರಿತು
ಗೆಳೆತನಕೆ ಭಾಷ್ಯ ಬರೆದುದ ಅರಿಯದೆ
ರೊಟ್ಟಿ ಎಸೆದು ಬೆಣ್ಣೆಗೆ ಮಣ್ಣಾಗುವ
ಮನುಜನೇನೆನ್ನುವೆ ಕನಕ

– ಭಾರತಿ ಅಶೋಕ್.

ವಂಚಕಿ ಎನ್ನಲೇ..

ಮಿಂಚನು ಹರಿಸುವ ಸುಂದರ ನಯನದೆ
ಸಿಂಚನ ಗೈದಿದೆ ಒಲವಹನಿ
ಹೊಂಚನು ಹಾಕುತ ಹಾಡುತಲಿರುವಳು
ಪಂಚಮ ಸ್ವರವಿದು ಕೊರಳ ಧ್ವನಿ

ಸಂಚಿದು ಎನ್ನಲೆ ಮನವನು ಕಸಿಯಲು
ಲಂಚದ ರೂಪವೆ ಸಿರಿ ವದನ?
ವಂಚನೆ ಗೈವಳೆ ಸುಂದರಿ ಕೋಮಲೆ
ವಂಚಕಿಯೆನ್ನಲು ನೊಂದ ಮನ

ಕಂಚಿನ ಕಂಠದೆ ಒಲವಿನ ರಾಗವು
ಕೊಂಚವೆ ಸೆಳೆದಿದೆ ಪ್ರಿಯತಮನ
ಕುಂಚದಿ ಸೃಷ್ಟಿಸಿ ಸುಂದರ ಚಿತ್ರವ
ಹಂಚಿದ ಕರಕಿದೊ ಈ ನಮನ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

(ಚಿತ್ರ ಶ್ರೀ ಸತೀಶ್ ಎಲೆಸಾರ ರವರ ವಾಲ್ನಿಂದ)

ತುಂಗಭದ್ರಾ ನೀರಿನ ಮಟ್ಟ



ಬುಧವಾರ : 29-11-2023

ಗರಿಷ್ಠ ಮಟ್ಟ	1633 ಅಡಿ
ಇಂದಿನ ಮಟ್ಟ	1593.69 ಅಡಿ
ಒಳ ಹರಿವು	607 ಕ್ಯುಸೆಕ್
ಹೊರ ಹರಿವು	5467 ಕ್ಯುಸೆಕ್
ಇಂದಿನ ಸಾಮರ್ಥ್ಯ	14.389 ಟಿಎಂಸಿ
ಗರಿಷ್ಠ ಸಾಮರ್ಥ್ಯ	105.788 ಟಿಎಂಸಿ

ಕಳೆದ ವರ್ಷ ಇದೇ ದಿನ

ಗರಿಷ್ಠ ಮಟ್ಟ	1633 ಅಡಿ
ಇಂದಿನ ಮಟ್ಟ	1629.69 ಅಡಿ
ಒಳ ಹರಿವು	1958 ಕ್ಯುಸೆಕ್
ಹೊರ ಹರಿವು	7315 ಕ್ಯುಸೆಕ್
ಸಾಮರ್ಥ್ಯ	92.907 ಟಿಎಂಸಿ

ಭಾರತವೀಗ ಜಾಗತೀಕರಣದ ಘಟ್ಟದಲ್ಲಿ ಬಲಿಷ್ಠ ದೇಶಗಳ ಗುಲಾಮಗಿರಿಯತ್ತ, ಕಾರ್ಪೊರೇಟ್ ಹಿತಾಸಕ್ತಿಗಳಿಗಾಗಿ ರೈತರನ್ನು ಬಲಿಕೊಡುವುದೇ ಅಭಿವೃದ್ಧಿ ಎಂಬತ್ತ ಚಲಿಸುತ್ತಿದೆ. ಹಿಂದೆ ಶಕ್ತಿ ರಾಜಕಾರಣಕ್ಕೆ ಪ್ರವೇಶ ಜನಪರ ಚಳುವಳಿಗಳ ಮೂಲಕವಾಗಿತ್ತು; ಈಗ ಅದಕ್ಕೆ ಹತ್ಯಾಕಾಂಡಗಳ ಇಲ್ಲವೇ ಕಾರ್ಪೊರೇಟ್ ಸಂಸ್ಥೆಗಳು ಕೊಡಮಾಡುವ ರೊಕ್ಕದಿಂದ ಹಾದಿ ನಿರ್ಮಾಣಗೊಳ್ಳುತ್ತಿದೆ. ಅಕ್ರಮವಾಗಿ ಸಂಪತ್ತು ಗಳಿಸಿದವರು ಅದನ್ನು ನ್ಯಾಯಬದ್ಧಗೊಳಿಸಲು ರಾಜಕೀಯ ಅಧಿಕಾರ ಹಿಡಿಯುತ್ತಿದ್ದಾರೆ; ಉದ್ಯಮಿಗಳು ರಾಜಕಾರಣಗಳಾಗಿ ರಾಜಕಾರಣಿಗಳು ಉದ್ಯಮಿಗಳಾಗಿ ರೂಪಾಂತರ ಆಗುತ್ತಿದ್ದಾರೆ; ಚುನಾವಣಾ ವಿಜಯಗಳಿಗಾಗಿ ಧರ್ಮದ ಹೆಸರಲ್ಲಿ ಜನರ ನೆತ್ತರನ್ನು ಹರಿಸಬಲ್ಲ ಯುದ್ಧತಂತ್ರವು, ಸಮರ್ಥ ನಾಯಕತ್ವದ ಕುರುಹಾಗಿ ಮಾನ್ಯವಾಗುತ್ತಿದೆ...

ನೆಹರೂ ಅವರ ಭಾರತದ ಪರಿಕಲ್ಪನೆ

ಕರ್ನಾಟಕ ಕಂಡ ಸಜ್ಜನ ರಾಜಕಾರಣಿಗಳಲ್ಲಿ ಒಬ್ಬರಾದ ಕಡಿದಾಳು ಮಂಜಪ್ಪನವರ ಆತ್ಮಕಥೆಯಲ್ಲಿ ಸ್ವಾರಸ್ಯಕರ ಪ್ರಸಂಗವೊಂದಿದೆ. ವಿಶ್ವೇಶ್ವರಯ್ಯನವರ ಜನ್ಮಶತಾಬ್ದಿ ಕಾರ್ಯಕ್ರಮಕ್ಕೆಂದು ನೆಹರೂ ಬೆಂಗಳೂರಿಗೆ ಬಂದಿರುತ್ತಾರೆ. ಕಾರ್ಯಕ್ರಮದ ಬಳಿಕ ಸರ್ ಎಂವಿ ಮನೆಗೆ ಭೇಟಿಕೊಡುವ ಆಶಯವನ್ನು ಅವರು ವ್ಯಕ್ತಪಡಿಸುತ್ತಾರೆ. ಕಾರ್ಯಕ್ರಮ ಮುಗಿವ ಹೊತ್ತಿಗೆ ಕಡಿದಾಳರು ಬಂದು ನೆಹರೂಗೆ ಇದನ್ನು ನೆನಪಿಸುತ್ತಾರೆ. ಆಗ ನೆಹರೂ ಪ್ರತಿಕ್ರಿಯೆ ಅನಿರೀಕ್ಷಿತವಾಗಿತ್ತು:

"ಯಾವುದೊ ಯೋಚನೆಯಲ್ಲಿ ಮಗ್ನರಾಗಿದ್ದ ನೆಹರೂರವರು ನನ್ನ ಮೇಲೆ ಬಹಳ ಕುಪಿತರಾಗಿ 'ವಾಟ್ ಡು ಯು ಮೀನ್' ಎಂದು ಗದರಿಸಿದರು. ನನಗೂ ಬಹಳ ಕೋಪಬಂತು. ನಾನು ಸುತ್ತಮುತ್ತಲಿದ್ದವರಿಗೆಲ್ಲ ಕೇಳಿಸುವಂತೆ 'ಇದು ನನ್ನ ಸಲಹೆಯಲ್ಲ. ತಾವು ದಾರಿಯಲ್ಲಿ ಬರುತ್ತಿದ್ದಾಗ ಹೇಳಿದ್ದ ವಿಚಾರವನ್ನು ಜ್ಞಾಪಕಕ್ಕೆ ತಂದೆ' ಎಂದು ಇಂಗ್ಲೀಷಿನಲ್ಲಿ ಗಟ್ಟಿಯಾಗಿ ಹೇಳಿ, ಹಿಂದುಗಡೆ ಸಾಲಿಗೆ ಹೋಗಿ ಕುಳಿತುಕೊಂಡೆ. ನನಗೆ ಅವಮಾನವಾದಂತಾಗಿತ್ತು. ನೆಹರೂರವರು ಪ್ರಧಾನಿಯೆಂಬುದನ್ನು ಲೆಕ್ಕಿಸದೆ ಅವರ ಸಮ್ಮುಖದಲ್ಲೇ ಕೋಪ ಪ್ರದರ್ಶಿಸಿದೆ. ಸುಮಾರು ಐದು ನಿಮಿಷಗಳ ನಂತರ ನೆಹರೂ ತಾವು ಹೇಳಿದ್ದು ತಪ್ಪೆಂದು ಮನಗಂಡು ನನ್ನನ್ನು ಕರೆದುಕೊಂಡು ಬರುವಂತೆ ಬದಿಯಲ್ಲಿದ್ದವರಿಗೆ ಸೂಚಿಸಿದರು. ನಾನು ಬಳಿಗೆ ಹೋಗಿ ಕರೆದಿದ್ದ ಉದ್ದೇಶವೇನೆಂದು ಕೇಳಿದೆ. ಅವರು ನಗುತ್ತ 'ವಿಶ್ವೇಶ್ವರಯ್ಯನವರ ಮನೆಗೆ ಹೋಗೋಣ' ಎಂದು ಹೇಳಿದರು. ಆದರೆ ವಿಶ್ವೇಶ್ವರಯ್ಯನವರ ಮನೆಗೆ ನಾನು ಅವರ ಜೊತೆ ಹೋಗಲಿಲ್ಲ."

ತಪ್ಪಾದರೆ ತಿದ್ದಿಕೊಳ್ಳಬಲ್ಲ ರಾಷ್ಟ್ರನಾಯಕನ ನಮ್ರತೆ ಹಾಗೂ ಸ್ವಾಭಿಮಾನದ ಜತೆ ರಾಜಿಮಾಡಿಕೊಳ್ಳದೆ ವ್ಯವಹರಿಸಬಲ್ಲ ಪ್ರಾದೇಶಿಕ ನಾಯಕನ ದಿಟ್ಟತನವುಳ್ಳ ಈ ಪ್ರಸಂಗ, ಭಾರತದ ಫೆಡರಲ್ ಸಂಬಂಧದ ಸಣ್ಣ ಸೂಕ್ಷ್ಮವೊಂದನ್ನು ಸಹ ಧ್ವನಿಸುವಂತಿದೆ. ನೆಹರೂ ಅವರೊಂದಿಗೆ ಕೆಂಗಲ್ ಹನುಮಂತಯ್ಯ ಮುಂತಾದವರು ಸಹ ದಿಟ್ಟವಾಗಿ ವರ್ತಿಸುತ್ತಿದ್ದರು. ನೆಹರೂ ಸರ್ಕಾರದಲ್ಲಿ ಕಾನೂನು ಮಂತ್ರಿಯಾಗಿದ್ದ ಅಂಬೇಡ್ಕರ್ ನೆಹರೂ ಜತೆ ತೀಕ್ಷ್ಣವಾದ ಭಿನ್ನಮತ ಹಂಚಿಕೊಳ್ಳುತ್ತಿದ್ದರು. ತಾವು ಮಂಡಿಸಿದ ಹಿಂದೂಕೋಡ್ ಮಸೂದೆಗೆ ನೆಹರೂ ಬೆಂಬಲಿಸದೆ ಹೋದಾಗ ರಾಜಿನಾಮೆ ಕೊಟ್ಟು ಹೊರಬಂದರು. ಇಂತಹ ದಿಟ್ಟತನಕ್ಕೆ ಸೈದ್ಧಾಂತಿಕ ಬದ್ಧತೆ ಮಾತ್ರವಲ್ಲ, ವೈಯಕ್ತಿಕವಾದ ನೈತಿಕತೆಯೂ ಬೇಕಾಗುತ್ತದೆ.

ನೆಹರೂ ಕೊಟ್ಟ ಪ್ರೀತಿಯನ್ನು ಮತ್ತೆಮತ್ತೆ ನೆನಪಿಸಿಕೊಳ್ಳುವ ಕಡಿದಾಳರು, ಅವರು ತೀರಿಕೊಂಡಾಗ ಮಗುವಿನಂತೆ ಬಿಕ್ಕಿಬಿಕ್ಕಿ ಅಳುತ್ತಾರೆ. ಕಾಶ್ಮೀರ ಸಮಸ್ಯೆಯನ್ನು ಸರಿಯಾಗಿ ನಿರ್ವಹಿಸದೇ ಹೋಗಿದ್ದು, ಮಗಳನ್ನು ಉತ್ತರಾಧಿಕಾರಿಯಾಗಿ ಬೆಳೆಸಿದ್ದು, ಬಡವರ ಮೇಲೆ ಅನುಕಂಪವಿದ್ದರೂ ಬಡವರ ಕಷ್ಟಗಳ ಬಗ್ಗೆ ವಾಸ್ತವಿಕ ತಿಳುವಳಿಕೆ ಇರದಿದ್ದುದು, ನೆಹರೂ ದೋಷಗಳೆಂದು ನಿಷ್ಠುರ ನುಡಿಯುತ್ತಾರೆ. ಅದೇ ಹೊತ್ತಿಗೆ ನೆಹರೂ "ಈ ದೇಶದಲ್ಲಿ ಪ್ರಜಾಪ್ರಭುತ್ವ ಪದ್ಧತಿ ನೆಲೆಗೊಳ್ಳುವಂತೆ ಮಾಡಲು ಸತತವಾಗಿ ಶ್ರಮಿಸಿದರು" ಎಂದು ಹೇಳಿಕೆ ಮಾಡುತ್ತಾರೆ.

ಪ್ರಜಾಪ್ರಭುತ್ವ ಪದ್ಧತಿ ನೆಲೆಗೊಳಿಸುವುದು ಎಂದರೇನು? ಅದು ನೆಲೆಗೊಳ್ಳುವುದು ಒಬ್ಬ ನಾಯಕನಿಂದಲೊ ಜನ ಸಮುದಾಯದಿಂದಲೊ? ಅಂತಿಮವಾಗಿ ಜನರಿಂದಲೇ ಆದರೂ ಅವರನ್ನು ಪ್ರೇರಿಸುವ ನಾಯಕರ ಪಾಲೂ ಅದರಲ್ಲಿರುತ್ತದೆ. ಪ್ರಜಾಪ್ರಭುತ್ವವನ್ನು ಓಟಿನ ಪರಿಭಾಷೆಯಲ್ಲಿ ನೋಡುವುದಾದರೆ, ಸಮಸ್ತ ಪ್ರಜೆಗಳಿಗೂ ತರಮವಿಲ್ಲದೆ ಮತದಾನದ ಹಕ್ಕನ್ನು ದೊರಕಿಸಿದ್ದು 1947ರ ನಂತರ ಭಾರತದ ದೊಡ್ಡ ಸಾಧನೆ ಎನ್ನುವರುಂಟು. ಇದರಲ್ಲಿ ಕೊಂಚ ನಿಜವಿದೆ. ಯಾಕೆಂದರೆ, ಇದೇ ಹೊತ್ತಲ್ಲಿ ಎರಡು ಶತಮಾನಗಳಷ್ಟು ಹಿರಿತನವಿದ್ದ ಅಮೇರಿಕದ ಪ್ರಜಾಪ್ರಭುತ್ವದಲ್ಲಿ, ಕರಿಯರಿಗೆ ಮತದಾನದ ಹಕ್ಕು ಇರಲಿಲ್ಲ. ಆದರೆ ಈ ಓಟುಪದ್ಧತಿ ದಮನಿತ ದಲಿತರ ಬಡವರ ಮಹಿಳೆಯರ ಬಾಳನ್ನು ನಾಟಕೀಯವಾಗಿಯೇನೂ ಬದಲಿಸಲಿಲ್ಲ. ಎಂತಲೇ ದಲಿತರು ಸಹಜವಾಗಿ 'ಯಾರಿಗೆ ಬಂತು ನಲವತ್ತೇಳರ ಸ್ವಾತಂತ್ರ್ಯ' ಎಂದು ಕೇಳಬೇಕಾಯಿತು. ಈಗ ಇದೇ ಪ್ರಶ್ನೆಯನ್ನು ಬಹುರಾಷ್ಟ್ರೀಯ ಕಂಪನಿಗಳಿಗಾಗಿ ತಮ್ಮ ಭೂಮಿ ನದಿ ಕಾಡು ಬೆಟ್ಟಗಳನ್ನು ಕಳೆದುಕೊಳ್ಳಬೇಕಾಗಿರುವ ಭಾರತದ ರೈತರೂ ಆದಿವಾಸಿಗಳೂ ಕೇಳುತ್ತಿದ್ದಾರೆ. ಮತೀಯ ಹಲ್ಲೆಯಿಂದ ನಲುಗುತ್ತಿರುವ ಮುಸ್ಲಿಮರೂ ಪುರುಷವಾದಿಗಳಿಂದ ಬಸವಳಿದಿರುವ ಮಹಿಳೆಯರೂ ತಮ್ಮ ಕಾಡುಗಳನ್ನು ಕಳೆದುಕೊಳ್ಳುತ್ತಿರುವ ಆದಿವಾಸಿಗಳೂ ಕೇಳುವಂತಾಗಿದೆ.

ಆದ್ದರಿಂದ ಪ್ರಜಾಪ್ರಭುತ್ವ ನೆಲೆಗೊಳಿಸುವ ನಿಜವಾದ ವಿಧಾನವೆಂದರೆ, ದೇಶದ ದಮನಿತರು ಘನತೆಯಿಂದ ಬದುಕುವ ಪರಿಸರ ನಿರ್ಮಿಸುವುದು. ಈ ದಿಸೆಯಲ್ಲಿ ನೆಹರೂ ಒಳಗೊಂಡಂತೆ ಅಂಬೇಡ್ಕರ್ ಗಾಂಧಿ ಲೋಹಿಯಾ ಮುಂತಾದವರು, ತಮ್ಮೆಲ್ಲ ತಾತ್ವಿಕ ಭಿನ್ನಮತ ಮತ್ತು ವಾಗ್ವಾದಗಳ ಜತೆಗೆ ಭಾರತವನ್ನು ರೂಪಿಸಲು ಮಾಡಿದ ಚಿಂತನೆ ಮತ್ತು ಕ್ರಿಯೆಗಳನ್ನು ಪರಿಶೀಲಿಸಬೇಕಿದೆ. ಇವರ ಪೈಕಿ ನೆಹರೂ ನಾಯಕತ್ವದ ಜತೆಗೆ ಅಧಿಕಾರ ಚಲಾಯಿಸುವ ಅವಕಾಶವನ್ನೂ ಹದಿನೇಳು ವರ್ಷ ಕಾಲ ಪಡೆದಿದ್ದರು. ಅನೇಕ ಸಲ ಪ್ರಬಲ ನಾಯಕತ್ವವೆನ್ನುವುದು ಪ್ರಜಾಪ್ರಭುತ್ವಕ್ಕೆ ಕಸುವಾಗಿರುವಂತೆ, ನಾಯಕರು ಕಾಣುವ ಕಣ್ಣು ಕೇಳುವ ಕಿವಿ ಕಳೆದುಕೊಂಡಾಗ ಹಗೆಯೂ ಆಗಬಲ್ಲದು. ಇದಕ್ಕೆ ನೆಹರೂ ಖುದ್ದಾಗಿ ಬೆಳೆಸಿದ ಇಂದಿರಾ ಸಾಕ್ಷಿ. ಈಗ ಇಂದಿರಾರನ್ನು ಮೀರಿಸುವ ಸರ್ವಾಧಿಕಾರಿಗಳು ಭಾರತದ ರಾಜಕಾರಣದಲ್ಲಿ ಉದಿಸಿ ಮುನ್ನಿಂತಿದ್ದಾರೆ. ಅವರು ತಮ್ಮ ಸಹೋದ್ಯೋಗಿಗಳನ್ನು ಮಾಸ್ತರನು ಶಾಲೆಯ ಹುಡುಗರನ್ನು ನಿಲ್ಲಿಸಿ ವಿಚಾರಣೆ ನಡೆಸುವಂತೆ ವರ್ತಿಸಬಲ್ಲರು; ಅದೊಂದು ಅಪಮಾನವೆಂದು ಭಾವಿಸಿ ಪ್ರತಿಭಟಿಸಬಲ್ಲ ಕಡಿದಾಳರ ಆತ್ಮಗೌರವ ಅವರ ಸಹವರ್ತಿಗಳಲ್ಲಿಲ್ಲ. ಭಿನ್ನಮತಗಳನ್ನು ಸಹಿಸದ ಮತ್ತು ಅದನ್ನು ಹೆಸರಿಲ್ಲದಂತೆ ಹೊಸಕಿ ಹಾಕಬಲ್ಲ ಸರ್ವಾಧಿಕಾರಿತನವೇ ನಾಯಕತ್ವ ಎಂಬ ಗ್ರಹಿಕೆ ಈಚೆಗೆ ಚಾಲ್ತಿಗೆ ಬರುತ್ತಿದೆ. ಇದಕ್ಕೆ ತಕ್ಕಂತೆ ತಾವೊಪ್ಪದ ಏನೂ ಲೋಕದಲ್ಲಿ ಇರಬಾರದು ಎಂಬ ಧೋರಣೆಯ ಅಗ್ನಿಭಕ್ಷಕರು ಹುಟ್ಟಿಕೊಂಡಿದ್ದಾರೆ. ನ್ಯೂಯಾರ್ಕಿನಲ್ಲಿ ವಿಶ್ವವ್ಯಾಪಾರ ಸಂಸ್ಥೆಯ ಜೋಡಿಕಟ್ಟಡಗಳನ್ನು ಉಗ್ರಗಾಮಿಗಳು ಕೆಡವಿದಾಗ, ಅಮೆರಿಕದ ಅಧ್ಯಕ್ಷ ಜಾರ್ಜ್‌ಬುಶ್ 'ನೀವೀಗ ನಮ್ಮ ಜತೆಯಿಲ್ಲದಿದ್ದರೆ ನಮ್ಮ ವಿರುದ್ಧವಿದ್ದಂತೆ' ಎಂದು ಚೀತ್ಕರಿಸಿದ್ದು ಇದೇ ಪರಿಭಾಷೆಯಲ್ಲಿ. 'ಪ್ರಜಾಪ್ರಭುತ್ವ' ದೇಶಗಳಲ್ಲಿ ಹುಟ್ಟಿರುವ ಈ ಸರ್ವಾಧಿಕಾರದ ಪರಿಭಾಷೆ ಮೆರೆಯುವುದು ಒಂದು ವೈರುಧ್ಯ.

ತಾತ್ವಿಕ ಭಿನ್ನಮತ ಹೇಳಬಲ್ಲ ದಿಟ್ಟತನ ಮತ್ತು ಅದನ್ನಾಲಿಸಿ ಸ್ವವಿಮರ್ಶೆ ಮಾಡಿಕೊಳ್ಳುವ ಅಧಿಕಾರಸ್ಥರ ವಿನಯಗಳು, ಶಕ್ತಿರಾಜಕಾರಣಕ್ಕೆ ಮಾತ್ರ ಸಂಬಂಧಪಟ್ಟಿಲ್ಲ. ಇವು ಚಲನಶೀಲತೆ ಕಳೆದುಕೊಳ್ಳಬಯಸದ ಎಲ್ಲ ಜೀವಂತ ಸಮಾಜ, ಧರ್ಮ, ಸಂಸ್ಕೃತಿ ಹಾಗೂ ಕುಟುಂಬಗಳಲ್ಲಿ ಕೂಡ ಇರಬೇಕಾದ ಮೌಲ್ಯಗಳಾಗಿವೆ. ಹಲವು ಧರ್ಮ ಭಾಷೆ ಸಂಸ್ಕೃತಿಗಳಿರುವ ದೇಶಗಳಲ್ಲಿ ಭಿನ್ನಮತ ಮತ್ತು ಅನ್ಯಾಯ ಪ್ರಜ್ಞೆಯಿಂದ ಹುಟ್ಟುವ ಪ್ರತಿರೋಧಗಳು ತೀರ ಸಹಜ. ಅವನ್ನು ಆ ದೇಶದ ಸಮಾಜ ಹೇಗೆ ನಿಭಾಯಿಸುತ್ತದೆ ಎಂಬುದು ಅದರ ಪ್ರಬುದ್ಧತೆಯ ಅಳತೆಗೋಲು. ರಾಜಕೀಯ ಪರಿಭಾಷೆಯಲ್ಲಿ ಹೇಳುವುದಾದರೆ, ಅಮೆರಿಕ ಭಾರತ ಪಾಕಿಸ್ತಾನ ಬಾಂಗ್ಲಾ ಶ್ರೀಲಂಕೆಗಳಲ್ಲಿ ಪ್ರಜಾಪ್ರಭುತ್ವ ಪದ್ಧತಿಯಿದೆ. ಆದರೆ ಅದರ ತಿರುಳಾಗಿರುವ ಪ್ರಜಾಪ್ರಭುತ್ವೀಯ ಮನೋಭಾವ ಅಲ್ಲಿನ ಸಮಾಜಗಳಲ್ಲಿ ಬೇರೂರಿದೆಯೇ? ಭಿನ್ನವಾದ ಅಭಿಪ್ರಾಯ, ಮತ, ಪಂಥ, ಆಹಾರದ ಮೇಲೆ ಹಲ್ಲೆಗಳು ಸತತ ನಡೆಯುತ್ತಿವೆ.

ರಹಮತ್ ತರೀಕೆರೆ
ಸಂಸ್ಕೃತಿ ಚಿಂತಕರು

ಈ ಸಂವಾದರಹಿತ ಅಸಹನೆ ಹಿಂಸೆ ಮತ್ತು ಕ್ರೌರ್ಯಕ್ಕೆ ಕಾರಣವಾಗಿದೆ. ಜಾತೀಯ ರಾಜಕೀಯ ಹಿಂಸೆಯ ಮೂಲವು ಧರ್ಮದಲ್ಲಿರುವುದಿಲ್ಲ, ಹಿಂಸೆಗೆ ತಕ್ಕಂತೆ ಮಾಡಿಕೊಳ್ಳಲಾಗುವ ಧರ್ಮದ ವ್ಯಾಖ್ಯಾನದಲ್ಲಿರುತ್ತದೆ.

ನೆಹರೂ ಅವರಷ್ಟು ಆರಾಧನೆಗೂ ಟೀಕೆಗೂ ಗುರಿಯಾದ ನಾಯಕರು ಬಹುಶಃ ಬೇರೆಯಿಲ್ಲ. ಅವರ ಪ್ರಬಲ ಟೀಕಾಕಾರರಾಗಿದ್ದ ಲೋಹಿಯಾ, ಬಡಭಾರತದ ಪ್ರಧಾನಮಂತ್ರಿಯ ಸಿರಿವಂತ ಶೋಕಿಗಳನ್ನು ಗೇಲಿ ಮಾಡುತ್ತಿದ್ದರು. ಸನಾತನವಾದಿಗಳು ಅವರನ್ನು ಸೆಕ್ಯುಲರ್ವಾದದ ಮೂಲಕ ಹಿಂದೂಧರ್ಮ ನಾಶಮಾಡುವ ನಾಸ್ತಿಕನೆಂದು ದ್ವೇಷಿಸಿದರು. ಮುಸ್ಲಿಂಲೀಗಿನಲ್ಲಿದ್ದ ಮೂಲಭೂತವಾದಿಗಳು ಸಹ ನೆಹರೂರನ್ನು ಇಷ್ಟಪಡಲಿಲ್ಲ. ಕಮ್ಯುನಿಸ್ಟರು ಸಮಾಜವಾದದ ಹೆಸರಲ್ಲಿ ಸೋವಿಯತ್ ಪ್ರಿಯರೆಂಬ ಕಾರಣಕ್ಕೆ ಬೆಂಬಲಿಸಿದರೂ ನಂತರ ದೂರಸರಿದರು. ಯಾಕೆಂದರೆ ಜಗತ್ತಿನಲ್ಲೇ ಚುನಾವಣೆ ಮೂಲಕ ಅಧಿಕಾರಕ್ಕೆ ಬಂದ ಮೊಟ್ಟಮೊದಲ ಕಮ್ಯುನಿಸ್ಟ್ ಸರ್ಕಾರವನ್ನು ಕೇರಳದಲ್ಲಿ ನೆಹರೂ ದೊಡ್ಡ ಕಾರಣಗಳಿಲ್ಲದೆ ವಜಾ ಮಾಡಿದ್ದರು. ತೆಲಂಗಾಣದಲ್ಲಂತೂ ಸರ್ದಾರ್ ಪಟೇಲರ ಹುಕುಮಿನ ಮೇರೆಗೆ ಭಾರತೀಯ ಸೈನ್ಯ ಲಕ್ಷಾಂತರ ಕಮ್ಯುನಿಸ್ಟ್ ಚಳುವಳಿಯಲ್ಲಿದ್ದ ರೈತರನ್ನು ಕೊಂದುಹಾಕಿತು. ಆಗ ಸ್ವತಃ ನೆಹರೂ ಪ್ರಧಾನಮಂತ್ರಿಯಿದ್ದರು. ಸೋಜಿಗವೆಂದರೆ, ತಮ್ಮ ಧಾರ್ಮಿಕ ಪ್ರಜ್ಞೆಗೆ ಪ್ರತಿಯಾಗಿ ದೇವರ ಅಸ್ತಿತ್ವದಲ್ಲಿ ನಂಬಿಕೆಯಿಲ್ಲದ, ತಮ್ಮ ಪಾಶ್ಚಿಮಾತ್ಯ ನಾಗರಿಕತೆಯ ಟೀಕೆಗೆ ಪ್ರತಿಯಾಗಿ ಪಾಶ್ಚಿಮಾತ್ಯವಾದಿ ವೈಚಾರಿಕತೆಯನ್ನು ವಿಜ್ಞಾನವನ್ನೂ ನಂಬಿದ, ತಮ್ಮ ಗ್ರಾಮಸ್ವರಾಜ್ಯದ ಕಲ್ಪನೆಗೆ ವ್ಯತಿರಿಕ್ತವಾಗಿ ಬೃಹತ್ ಉದ್ಯಮಗಳ ಮೂಲಕ ಭಾರತ ಕಟ್ಟುವ ಕನಸನ್ನು ಹೊತ್ತಿದ್ದ ಕೇಂಬ್ರಿಜ್ ಪದವೀಧರ ನೆಹರೂರನ್ನು, ಗಾಂಧಿ ತಮ್ಮ ಉತ್ತರಾಧಿಕಾರಿಯನ್ನಾಗಿ ಬೆಳೆಸಿದ್ದು. ಇದಕ್ಕೆ ನೆಹರೂ ಅವರಲ್ಲಿದ್ದ ಉದಾರವಾದವೂ ಒಂದು ಕಾರಣವಾಗಿತ್ತೇ? ಕಾಶ್ಮೀರಿ ಪಂಡಿತ ಸಮುದಾಯದಿಂದಬಂದವರಾಗಿದ್ದರೂನೆಹರೂಬ್ರಾಹ್ಮಣವಾದಿಯಾಗಿರಲಿಲ್ಲ. ಧರ್ಮ ಮತ್ತು ಜಾತಿಗಳ ವಿಷಯದಲ್ಲಿ ವಲ್ಲಭಭಾಯಿ ಪಟೇಲ್, ರಾಜೇಂದ್ರ ಪ್ರಸಾದ್, ರಾಜಗೋಪಾಲಾಚಾರಿ ಮುಂತಾದವರಿಗೆ ಹೋಲಿಸಿದರೆ ಹೆಚ್ಚು ವೈಚಾರಿಕತೆ ಹಾಗೂ ಮುಕ್ತಮನಸ್ಸು ಹೊಂದಿದ್ದರು. ಹಿಟ್ಲರನನ್ನು ಸೋಲಿಸಲು ಭಾರತೀಯರು ಬ್ರಿಟಿಶರ ಜತೆ ಕೈಜೋಡಿಸಬೇಕು ಎಂದು ಗಾಂಧಿ ಕರೆಗೊಡುವಾಗ, ಬೋಸರು ಹಿಟ್ಲರನ ಕೈಕುಲುಕಲು ಜರ್ಮನಿಗೆ ಹೋಗಿದ್ದರು. ಆದರೆ ಇಟಲಿಗೆ ಹೋಗಿದ್ದ ನೆಹರೂ, ಮುಸಲೋನಿ ಬಯಸಿದರೂ ಅವನ ಭೇಟಿಗೆ ನಿರಾಕರಿಸಿದರು. ರಾಜಕೀಯ ಸರ್ವಾಧಿಕಾರವು ಎಸಗುವ ಕೇಡುಗಳ ಬಗ್ಗೆ ಅವರಿಗೆ ತಾತ್ವಿಕ ಖಚಿತತೆಯಿತ್ತು.

ನಿಜ, ನೆಹರೂಗೆ ತಮ್ಮ ಸಮಕಾಲೀನರಾದ ಅಂಬೇಡ್ಕರ್ ಅವರ ಆಳವಾದ ವಿದ್ವತ್ತು ಮತ್ತು ದಲಿತರ ಪ್ರಜ್ಞೆ ಇರಲಿಲ್ಲ; ಲೋಹಿಯಾಗಿದ್ದಂತೆ ಭಾರತದ ಚರಿತ್ರೆ ಪುರಾಣಗಳನ್ನು ವಿಶ್ಲೇಷಿಸುವ ಹರಿತವಾದ ಬೌದ್ಧಿಕತೆಯಾಗಲಿ ನೈತಿಕ ನಿಷ್ಠುರತೆಯಾಗಲಿ ಇರಲಿಲ್ಲ; ಭಗತಸಿಂಗರಿಗಿದ್ದ ವರ್ಗನೆಲೆಯಿಂದ ಹುಟ್ಟಿದ ಆಳವಾದ ಸಮಾಜವಾದಿ ಪ್ರಜ್ಞೆಯಿರಲಿಲ್ಲ. ಅವರ ಬರೆಹ ಮತ್ತು ಭಾಷಣವುಳ್ಳ ಕೃತಿಗಳಾದರೂ ದೊಡ್ಡ ವಿದ್ವತ್‌ಕೃತಿಗಳಲ್ಲ. ಆದರೆ ಅವರಲ್ಲಿ ಖಂಡಿತವಾಗಿ, ಭಾರತದಂತಹ ಬಹುಸಾಂಸ್ಕೃತಿಕ ನಾಡನ್ನು ಮುನ್ನಡೆಸಲು ಒಬ್ಬ ರಾಜಕಾರಣಿಗೆ ಇರಬೇಕಾದ ಕಲ್ಪನೆಯಿತ್ತು. ದೇಶದ ಚರಿತ್ರೆ ಪರಂಪರೆ ಸಂಸ್ಕೃತಿಗಳ ತಕ್ಕ ತಿಳುವಳಿಕೆ ಮತ್ತು ಸಂವೇದನೆಯಿತ್ತು. ಅವರ ಕೃತಿಗಳಲ್ಲಿ ವಸಾಹತುಶಾಹಿ ವಿರೋಧಿ ಚಳುವಳಿ ಕಾಲದಲ್ಲಿ ನಡೆದ ರಾಜಕೀಯ ಸೈದ್ಧಾಂತಿಕ ವಾಗ್ವಾದಗಳಿವೆ; ಸಮಕಾಲೀನ ವಿದ್ಯಮಾನಗಳ ಅಪೂರ್ವ ಮಾಹಿತಿಗಳಿವೆ; ಮುಖ್ಯವಾಗಿ ಹಿಂದೂ ಕೋಮುವಾದ ಮತ್ತು

ಹಂಪಿ ಟೈಮ್ಸ್ ಚಾನಲ್
ವಿಜಯನಗರದ ಹೆಮ್ಮೆ
FREE!
hampitimes epaper
save your mobile space !
SCAN QR CODE TO JOIN FOLLOW
HAMPI TIMES
whatsapp channel

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

ಜನ ಜಾಗೃತಿಗಾಗಿ ವಿಕಸಿತ ಭಾರತ ಸಂಕಲ್ಪ ಯಾತ್ರೆ

■ ಹಂಪಿ ಟೈಮ್ಸ್ ಬಳ್ಳಾರಿ

ದೇಶದ ಮೂಲೆ ಮೂಲೆಯಲ್ಲಿರುವ ಜನರಿಗೆ ಕೇಂದ್ರ ಸರ್ಕಾರದ ಯೋಜನೆಗಳು ಮತ್ತು ಅದರ ಪ್ರಯೋಜನಗಳ ಬಗ್ಗೆ ಮಾಹಿತಿ ನೀಡುವ ಉದ್ದೇಶದಿಂದ ವಿಕಸಿತ ಭಾರತ ಸಂಕಲ್ಪ ಯಾತ್ರೆಯನ್ನು ಪ್ರಾರಂಭಿಸಲಾಗಿದೆ. ಈ ಅಭಿಯಾನದ ಮೂಲಕ ದೇಶದ ಮೂಲೆ ಮೂಲೆಯ ಜನರನ್ನು ಜಾಗೃತಗೊಳಿಸುವ ಅಭಿಯಾನವನ್ನು ನಡೆಸಲಾಗುತ್ತಿದೆ ಎಂದು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಭುವನೇಶ್ ಕುಮಾರ್ ಅವರು ಹೇಳಿದರು.

ಕೆನರಾ ಬ್ಯಾಂಕ್, ಕರ್ನಾಟಕ ಗ್ರಾಮೀಣ ಬ್ಯಾಂಕ್ ಮತ್ತು ಗ್ರಾಮ ಪಂಚಾಯತಿ ಸಣಾಪುರ ಇವರ ಸಂಯುಕ್ತಾಶ್ರಯದಲ್ಲಿ ಕಂಪ್ಲಿ ತಾಲ್ಲೂಕಿನ ಸಣಾಪೂರ ಗ್ರಾಮದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಭಾರತ ಸರ್ಕಾರದ ವಿಕಸಿತ ಭಾರತ ಸಂಕಲ್ಪ ಯಾತ್ರೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು, ಮಾತನಾಡಿದರು. ಕೇಂದ್ರ ಸರ್ಕಾರದ ಜನಕಲ್ಯಾಣ ಯೋಜನೆಗಳ ಮಾಹಿತಿ ನೀಡುವುದರೊಂದಿಗೆ ಜನಸಾಮಾನ್ಯರಿಗೂ ಆರೋಗ್ಯ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಅಭಿವೃದ್ಧಿ ಹೊಂದಿದ ಭಾರತ ಸಂಕಲ್ಪ ಯಾತ್ರೆಯಡಿ ಭಾರತವನ್ನು ಅಭಿವೃದ್ಧಿ

ಹೊಂದಿದ ರಾಷ್ಟ್ರವನ್ನಾಗಿ ಮಾಡಲು ಸಂಕಲ್ಪ ಕೈಗೊಳ್ಳಲಾಗಿದೆ ಎಂದರು.

ಈ ಅಭಿಯಾನದ ಮೂಲಕ ಸಾಮಾನ್ಯ ಜನರಿಗೆ ನೈರ್ಮಲ್ಯ ಸೌಲಭ್ಯಗಳು, ಹಣಕಾಸು ಸೇವೆಗಳು, ವಿದ್ಯುತ್ ಸಂಪರ್ಕಗಳು, ವಸತಿ ಮತ್ತು ಇತರ ಅಗತ್ಯ ಸೇವೆಗಳನ್ನು ಒದಗಿಸುವುದು ಕೇಂದ್ರ ಸರ್ಕಾರದ ಪ್ರಯತ್ನವಾಗಿದೆ. ಸಮಾಜದ ಕಟ್ಟಕಡೆಯ ಜನರಿಗೆ ಆಹಾರ, ಭದ್ರತೆ, ಪೌಷ್ಠಿಕಾಂಶ, ಆರೋಗ್ಯ ರಕ್ಷಣೆ, ಶುದ್ಧ ಕುಡಿಯುವ ನೀರು ಮತ್ತು ಗುಣಮಟ್ಟದ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸುವುದರ ಜೊತೆಗೆ ಸಮಾಜದ ಕೊನೆಯ ತುದಿಯಲ್ಲಿ ವಾಸಿಸುವ ಜನರಿಗೆ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವುದು ಗುರಿಯಾಗಿದೆ ಎಂದು ತಿಳಿಸಿದರು. ಎಲ್ಲಾ ಸರ್ಕಾರಿ ಪ್ರಯೋಜಿತ ಯೋಜನೆಗಳಾದ ಪಿಎಂಐಡಿವೈ, ಪಿಎಂಜೆಜೆಬಿವೈ, ಪಿಎಂಎಸ್‌ಬಿವೈ, ಎಪಿವೈಪಿಎಂ ಸ್ವಾನಿಧಿ, ಪಿಎಂ ವಿಶ್ವಕರ್ಮ ಮತ್ತು ಸ್ಟ್ಯಾಂಡ್ ಆಫ್ ಇಂಡಿಯಾ ಮುಂತಾದ ಯೋಜನೆಗಳ ಸೌಲಭ್ಯ ಪಡೆದುಕೊಳ್ಳುವಂತೆ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಕೇಂದ್ರ ಸರ್ಕಾರದ ಯೋಜನೆಗಳಡಿ ಸಾಲ ಪಡೆದುಕೊಂಡ ಫಲಾನುಭವಿಗಳು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಉಜ್ವಲಾ ಯೋಜನೆಯ ಫಲಾನುಭವಿಗಳಿಗೆ ಗ್ಯಾಸ್ ಹೊಲೆ ಸಿಲಿಂಡರ್ ವಿತರಿಸಲಾಯಿತು.

ಈ ಸಂಧರ್ಭದಲ್ಲಿ ಕರ್ನಾಟಕ ಗ್ರಾಮೀಣ ಬ್ಯಾಂಕ್ ಅಧ್ಯಕ್ಷ ಆರ್.ಡಿಲ್ಲಿ ಬಾಬು, ಸಹಾಯಕ ಮಹಾ ಪ್ರಾದೇಶಿಕ ಕಚೇರಿ ಕೆನರಾ ಬ್ಯಾಂಕ್ ಪ್ರಬಂಧಕರು ಡಿ.ವಿ.ಪಿ.ಆರ್ ಮುರಳಿ ಕೃಷ್ಣ, ಕರ್ನಾಟಕ ಗ್ರಾಮೀಣ ಬ್ಯಾಂಕ್ ಸಹಾಯಕ ಮಹಾ ಪ್ರಬಂಧಕರಾದ ಎಚ್.ಕೆ.ಗಿರಡ್ಡಿ, ಕೆನರಾ ಬ್ಯಾಂಕ್ ಎಲ್‌ಡಿಸಿಎಂ ಸೋಮನಗೌಡ ಐನಾಪೂರ, ನಬಾರ್ಡ ಡಿಡಿಎಂ ಯುವರಾಜ ಕುಮಾರ, ಗ್ರಾಮ ಪಂಚಾಯತ ಅಧ್ಯಕ್ಷ ವೈ.ರಾಮಣ್ಣ, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಮೂಕಯ್ಯ, ಬ್ಯಾಂಕ್ ಸಿಬ್ಬಂದಿ, ಗ್ರಾಹಕರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

ಮೈಕ್ರೋ ನ್ಯೂಸ್

ಪರೀಕ್ಷಾ ಕೇಂದ್ರಗಳ ಸುತ್ತ 200 ಮೀ. ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿ: ಡಿಸಿ ಪ್ರಶಾಂತ್ ಕುಮಾರ್ ಮಿಶ್ರಾ

ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯಲ್ಲಿ ಡಿ.01ರಿಂದ 06ರವರೆಗೆ ಅಖಿಲ ಭಾರತ ವೃತ್ತಿ ಪರೀಕ್ಷೆ (ಪೂರಕ) ಡಿಸೆಂಬರ್–2023 ರ ವೃತ್ತಿ ಪ್ರಾಯೋಗಿಕ ಮತ್ತು ತಾಂತ್ರಿಕ ರೇಖಾ ಚಿತ್ರ ವಿಷಯಗಳ, ಅನುತ್ತೀರ್ಣ ಅಭ್ಯರ್ಥಿಗಳಿಗೆ ಪೂರಕ ಪರೀಕ್ಷೆ ಹಾಗೂ ಐಜಿಜಿಣ ಔತಜಡಿ ತರಬೇತುದಾರರಿಗೆ (ಅಖಿಖ & ಆಖಿಖ ಖಥಿಣಜಟ) ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ಆವರಣವನ್ನು ದಂಡ ಪ್ರಕ್ರಿಯಾ ಸಂಹಿತೆ 1973ರ ಕಲಂ 144ರಲ್ಲಿನ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ನಿರ್ಬಂಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾ ದಂಡಾಧಿಕಾರಿಯೂ ಆಗಿರುವ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ. ಡಿ.01ರಿಂದ 06ರವರೆಗೆ ಬೆಳ್ಳಿಗ್ಗೆ 09ಗಂಟೆಯಿಂದ ಮಧ್ಯಾಹ್ನ 02.30 ರವರೆಗೆ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ ಜೆರಾಕ್ಸ್ ಸೆಂಟರ್ ಮತ್ತು ಇಂಟರ್‌ನೆಟ್ ಸೆಂಟರ್‌ಗಳನ್ನು ಕಾರ್ಯನಿರ್ವಹಿಸದಂತೆ ಅವರು ಆದೇಶಿಸಿದ್ದಾರೆ.

ಸದರಿ ಪ್ರದೇಶದಲ್ಲಿ ಅನಧಿಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರವೇಶ ನಿಷೇಧಿಸಲಾಗಿದ್ದು, ಈ ಆದೇಶವು ಪರೀಕ್ಷಾ ಮೇಲ್ವಿಚಾರಣೆ ಕಾರ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ಅನ್ವಯಿಸುವುದಿಲ್ಲ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

ಡಿ.10 ರಂದು ಪೊಲೀಸ್ ಕಾನ್ಸ್ಟೇಬಲ್ ಹುದ್ದೆಗೆ ಲಿಖಿತ ಪರೀಕ್ಷೆ

ಹಂಪಿ ಟೈಮ್ಸ್ ಬಳ್ಳಾರಿ

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಕಲ್ಯಾಣ ಕರ್ನಾಟಕ ಪ್ರದೇಶದ ಪೊಲೀಸ್ ಕಾನ್ಸ್ಟೇಬಲ್(ಸಿವಿಲ್) (ಪುರುಷ ಮತ್ತು ಮಹಿಳಾ) (ತೃತೀಯ ಲಿಂಗಿ ಪುರುಷ ಮತ್ತು ಮಹಿಳಾ) ಹಾಗೂ ಸೇವಾನಿರತ ಮತ್ತು ಬ್ಯಾಕ್‌ಲಾಗ್–454 ಹುದ್ದೆಗಳಿಗೆ ಡಿಸೆಂಬರ್ 10 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 12.30 ಗಂಟೆಯವರೆಗೆ ಲಿಖಿತ ಪರೀಕ್ಷೆ ನಡೆಯಲಿದೆ.

ಲಿಖಿತ ಪರೀಕ್ಷೆಗಳನ್ನು ಬೆಂಗಳೂರು ನಗರ, ಚಿತ್ರದುರ್ಗ, ದಾವಣಗೆರೆ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಬಳ್ಳಾರಿ, ವಿಜಯನಗರ ಮತ್ತು ಕೊಪ್ಪಳ ಜಿಲ್ಲೆಗಳ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಾಗುವುದು. ಲಿಖಿತ ಪರೀಕ್ಷೆಗೆ ಅರ್ಹರಿರುವ ಅಭ್ಯರ್ಥಿಗಳಿಗೆ ಕರೆ ಪತ್ರದ ಬಗ್ಗೆ ಮುಂಬರುವ ದಿನಗಳಲ್ಲಿ ಎಸ್.ಎಂ.ಎಸ್ ಮೂಲಕ ಮಾಹಿತಿ ನೀಡಲಾಗುವುದು ಹಾಗೂ ಕರೆ ಪತ್ರದ ಲಿಂಕ್ ಅನ್ನು ಸಹ ಕಳಿಸಲಾಗುವುದು. ಅಭ್ಯರ್ಥಿಗಳು ಕರೆಪತ್ರವನ್ನು ಡೌನ್‌ಲೋಡ್ ಮಾಡಿಕೊಂಡು ನಿಗದಿಪಡಿಸಿದ ದಿನಾಂಕದಂದು ಲಿಖಿತ ಪರೀಕ್ಷೆಗೆ ಹಾಜರಾಗುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ತಿಳಿಸಿದ್ದಾರೆ.

ಬರಗಾಲ ನಿರ್ವಹಣೆಗೆ ಸಿದ್ಧರಾಗಿ

ಶಾಸಕ ಕೃಷ್ಣ ನಾಯ್ಕ್ ಅಧಿಕಾರಿಗಳಿಗೆ ಸೂಚನೆ । ಕೆಡಿಪಿ ಸಭೆ

■ ಹಂಪಿ ಟೈಮ್ಸ್ ಹೂವಿನ ಹಡಗಲಿ

ಈ ಬಾರಿ ಕಡಿಮೆ ಪ್ರಮಾಣದಲ್ಲಿ ಮಳೆಯಾಗಿ ತಾಲೂಕಿನಲ್ಲಿ ಬರಗಾಲದ ಛಾಯೆ ಕಾರ್ಮೋಡ ಕವಿದಿದ್ದು ಅಧಿಕಾರಿಗಳು ತಮ್ಮ ತಮ್ಮ ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸಬೇಕೆಂದು ಶಾಸಕ ಕೃಷ್ಣ ನಾಯ್ಕ್ ಅಧಿಕಾರಿಗಳಿಗೆ ಸೂಚಿಸಿದರು. ಪಟ್ಟಣದ ತಾಲೂಕು ಪಂಚಾಯತಿ ರಾಜೀವ್ ಗಾಂಧಿ ಸಭಾಂಗಣದಲ್ಲಿ ತ್ರೈಮಾಸಿಕ ಕೆ.ಡಿ.ಪಿ.ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಬರಗಾಲ ಹಿನ್ನೆಲೆಯಲ್ಲಿ ಜನರಿಗೆ ಜಾನುವಾರುಗಳಿಗೆ ಕುಡಿಯುವ ನೀರಿನ ಜೊತೆಗೆ ಮೇವಿನ ಕೊರತೆಯಾಗದಂತೆ ಮುಂಜಾಗೃತೆ ವಹಿಸಿ ಯಾವುದಕ್ಕೂ ತೊಂದರೆಯಾಗದಂತೆ ಸಿದ್ಧತೆ ಮಾಡಿಕೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು. ಪಿಡಿಒಗಳು ಸಾಧ್ಯವಾದಷ್ಟು ಜನರ ಮಧ್ಯೆ ಇದ್ದು ಹಳ್ಳಿಗಳಲ್ಲಿನ ಸಮಸ್ಯೆಗಳನ್ನು ಕುಂದು ಕೊರತೆಗಳನ್ನು ಆಲಿಸಿ ಬಗೆಹರಿಸುವ ಕ್ರಮ ಕೈಗೊಳ್ಳಬೇಕೆಂದರು. ರೈತರಿಗೆ ಸರ್ಕಾರ ದಿಂದ ರಿಯಾಯಿತಿ ದರದಲ್ಲಿ ನೀರಾವರಿ ಪೈಪ್ ಗಳನ್ನು ವಿತರಣೆ ಮಾಡುತ್ತಿದ್ದು, ರೈತರಿಗೆ ವಿತರಿಸುವ ಪೈಪುಗಳು ಕಳಪೆ ಮಟ್ಟದಾಗಿರಬಾರದು, ಉತ್ತಮ ಗುಣಮಟ್ಟದ ಪೈಪುಗಳನ್ನು ತರಿಸಿಕೊಂಡು ರೈತರಿಗೆ ವಿತರಿಸಲು ಕ್ರಮ ಕೈಗೊಳ್ಳಬೇಕೆಂದು ಕೃಷಿ ಅಧಿಕಾರಿಗೆ ಸೂಚಿಸಿದರು. ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಪರಿಣಿತ ಶಿಕ್ಷಕರಿಂದ ಭೋಧನೆ ಮಾಡಿಸಿ,ವಿದ್ಯಾರ್ಥಿಗಳ ಪಗ್ರತಿಗೆ ರೂಪ ರೇಷ್ಮೆ ಹಾಕಿಕೊಂಡು, ಉತ್ತಮ ಫಲಿತಾಂಶ ಬರುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿ ಬೋಧನೆ ಮಾಡಬೇಕೆಂದು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಿದರು. ಪುರಸಭೆಯಲ್ಲಿ ಕೆಲಸಗಳು ವಿಳಂಬವಾಗುತ್ತಿವೆ ಕೆಲ ಅಧಿಕಾರಿಗಳು ಬೇಜವಾಬ್ದಾರಿತನದಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂಬ ಆರೋಪ ಸಾರ್ವಜನಿಕರಿಂದ ಕೇಳಿ ಬರುತ್ತಿವೆ. ಕೂಡಲೇ ಸಮಸ್ಯೆಗಳನ್ನು ಮುಖ್ಯ ಅಧಿಕಾರಿಗಳು ಬಗೆಹರಿಸಬೇಕೆಂದು ಸೂಚಿಸಿದರು.ಕಡಿಮೆ ಪ್ರಮಾಣದಲ್ಲಿ ಮಳೆಯಾಗಿರುವುದರಿಂದ ಅಂತರ್ಜಲ ನೀರಿನ ಪ್ರಮಾಣ ಕಡಿಮೆಯಾಗಿದ್ದು, ಸರ್ಕಾರದ ವ್ಯಾಪ್ತಿಯ ಬೋರ್ವೆಲ್ ಗಳಿಂದ ನೀರು ಸಾಕಾಗದಿದ್ದಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಬರದಂತೆ ಖಾಸಗೀ ಬೋರ್ ವೆಲ್ ಮಾಲೀಕರನ್ನು ಸಂಪರ್ಕಿಸಿ ಸಿದ್ದವಾಗಿಟ್ಟುಕೊಳ್ಳಿ, ತಾಲೂಕಿನಲ್ಲಿ ಅನೇಕ ಕಡೆ ಶುದ್ದಕುಡಿಯುವ ನೀರಿನ ಘಟಕಗಳು ಕೆಟ್ಟು ಹೋಗಿದ್ದು, ಅವುಗಳ ರಿಪೇರಿಗೆ ಕ್ರಮ ಕೈಗೊಳ್ಳಬೇಕೆಂದು ಕೂಡಲೇ ಟೆಂಡರ್ ಮಾಡಿ, ನಿರ್ವಹಣೆ ಮಾಡಿರಿ ಎಂದು ಕುಡಿಯುವ ನೀರು ನೈರ್ಮಲ್ಯ ಇಲಾಖೆಯ ಅಧಿಕಾರಿಗೆ ಸೂಚಿಸಿದರು. ಪ್ರತಿಯೊಂದು ಇಲಾಖೆಯ ಅಧಿಕಾರಿಗಳು ತಮ್ಮ ಸಮಸ್ಯೆಗಳ ಕುರಿತು ನನಗೆ ಮಾಹಿತಿ ನೀಡಿ, ತಾಲೂಕಿನ ಅಭಿವೃದ್ಧಿಗಾಗಿ ಎಲ್ಲರೂ ಕೈ ಜೋಡಿಸಬೇಕೆಂದು ಹೇಳಿದರು. ಈ ಪ್ರಗತಿ ಪರಿಶೀಲನ ಸಭೆಯಲ್ಲಿ ತಹಶೀಲ್ದಾರರಾದ ಶ್ರೀಮತಿ ಕೆ. ಶರಣಮ್ಮ, ತಾಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ ಜಯರಾಮ್ ಬಿ. ಚೌಹಾಣ್, ತಾಲೂಕು ಪಂಚಾಯಿತಿಯ ಯೋಜನ ನಿರ್ದೇಶಕ ತೋಟದ್, ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಗ್ರಾಮ ಪಂಚಾಯಿತಿಗಳ ಪಿಡಿಒಗಳು ಹಾಜರಿದ್ದರು. ಇತ್ತೀಚೆಗೆ ಭಾರಿ ಗುಡುಗು ಸಿಡಿಲಿಗೆ ಹೊಳಗುಂದಿ ಗ್ರಾಮದ ಕುರಿಗಾಯಿ ಯಲ್ಲಪ್ಪ ಅಳಹುಂಡಿ ಅವರ 21 ಕುರಿಗಳು ಸಾವನ್ನಪ್ಪಿದ್ದವು. ಪ್ರಕೃತಿ ವಿಕೋಪದಡಿ ಮೃತಪಟ್ಟ ಕುರಿಗಳಿಗೆ ಸರ್ಕಾರದಿಂದ ಮಂಜೂರಾದ 80 ಸಾವಿರ ರೂಪಾಯಿ ಪರಿಹಾರದ ಚೆಕ್ಕನ್ನು ಈ ಸಂದರ್ಭದಲ್ಲಿ ಕುರಿಗಾಯಿ ಯಲ್ಲಪ್ಪ ಅವರಿಗೆ ವಿತರಿಸಲಾಯಿತು.

ಎಂ.ಎಂ.ಶಿವಪ್ರಕಾಶ್ ದಂಪತಿಗೆ ಮೈಲಾರ ಬಸವಲಿಂಗ ಶರಣಶ್ರೀ ರಾಜ್ಯಪ್ರಶಸ್ತಿ

ಲೇಖಕರು ಮತ್ತು ಹಂಪಿ ಟೈಮ್ಸ್ ಪತ್ರಿಕೆ ಅಂಕಣಕಾರ ಎಂ.ಎಂ.ಶಿವಪ್ರಕಾಶ್ ಹಾಗೂ ಕೆ.ಎಸ್.ಸಾವಿತ್ರಿ ದಂಪತಿಗೆ "ಮೈಲಾರ ಬಸವಲಿಂಗ ಶರಣ ಶ್ರೀ" ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿದೆ. ಭಾನುವಾರ ಮೈಲಾರದಲ್ಲಿ ನಡೆದ ಕರ್ನಾಟಕ ಸಂಭ್ರಮ 50 ಕಾರ್ಯಕ್ರಮದಲ್ಲಿ ಡಾ. ಬಸವ ರಮಾನಂದ ಮಹಾಸ್ವಾಮಿಗಳು ಹೆಗ್ಗುಂದ ನೆಲಮಂಗಲ ಇವರು ಪ್ರದಾನ ಮಾಡಿದರು. ಮೈಲಾರಲಿಂಗೇಶ್ವರ ದೇವಸ್ಥಾನದ ವಂಶ ಪಾರಂಪರೆ ಧರ್ಮಕರ್ತ ಗುರು ವೆಂಕಪ್ಪಯ್ಯ ಒಡೆಯರ್ ಸಾನ್ನಿಧ್ಯ ವಹಿಸಿದ್ದರು. ಕರ್ನಾಟಕ ಗ್ರಾಮೀಣ ಯುವ ಕನ್ನಡ ಸಾಹಿತ್ಯ ಕ್ರಿಯಾ ಸಮಿತಿ ಅಧ್ಯಕ್ಷರಾದ ಪುಟ್ಟಪ್ಪ ತಂಬೂರಿ ಅಧ್ಯಕ್ಷತೆ ವಹಿಸಿದ್ದರು. ಸಾಹಿತ್ಯ ಸಂಸ್ಕೃತಿ ಕಾರ್ಯಗಳು ಪರಿಶುದ್ಧ ಕರ್ತವ್ಯ ನಿಷ್ಠೆ ಹಾಗೂ ಶೈಕ್ಷಣಿಕ ಕಾರ್ಯಗಳನ್ನು ಗುರುತಿಸಿ ದಂಪತಿಗೆ ಈ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಬಸವಲಿಂಗ ಶರಣ ಶ್ರೀ ಪ್ರಶಸ್ತಿ ಪಡೆದ ದಂಪತಿಗೆ ಹಂಪಿ ಟೈಮ್ಸ್ ಪತ್ರಿಕೆಯು ಅಭಿನಂದನೆ ಸಲ್ಲಿಸುತ್ತದೆ

ಕಂಪ್ಯೂಟರ್, ಲ್ಯಾಪ್‌ಟಾಪ್ ಖರೀದಿಸಲು ಸಹಾಯಧನಕ್ಕಾಗಿ ಅರ್ಹರಿಂದ ಅರ್ಜಿ ಆಹಾನ

■ ಹಂಪಿ ಟೈಮ್ಸ್ ಬಳ್ಳಾರಿ

ಕುರೇಕುಪ್ಪ ಪುರಸಭೆ ವ್ಯಾಪ್ತಿಯಲ್ಲಿ ಪ್ರಸ್ತಕ ಸಾಲಿನ ಎಸ್‌ಎಫ್‌ಸಿ ಮುಕ್ತನಿಧಿ ಯೋಜನೆಯಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಜನಾಂಗದ ಕಲ್ಯಾಣಕ್ಕಾಗಿ ಕಾಯ್ದಿರಿಸಿದ ಶೇ.24.10, 7.25 ವೈಯಕ್ತಿಕ ಸೌಲಭ್ಯಕ್ಕಾಗಿಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸೌಲಭ್ಯದ ವಿವರ: ಕುರೇಕುಪ್ಪ ಪುರಸಭೆ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗದ ಜನಾಂಗದ ಎಂ.ಬಿ.ಬಿ.ಎಸ್, ಬಿ.ಇ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಡೆಸ್ಕ್‌ಟಾಪ್ ಕಂಪ್ಯೂಟರ್ ಅಥವಾ ಲ್ಯಾಪ್‌ಟಾಪ್ ಖರೀದಿಸಲು ಸಹಾಯ ಧನ ನೀಡಲಾಗುವುದು.

ಸೂಚನೆ: ಅರ್ಜಿಗಳನ್ನು ಉಚಿತವಾಗಿ ಕುರೇಕುಪ್ಪ ಪುರಸಭೆ ಕಚೇರಿಯಲ್ಲಿ ಪಡೆಯಬಹುದು, ಡಿ.31ರೊಳಗಾಗಿ ಪುರಸಭೆ ಕಚೇರಿ ನಾಮಫಲಕದಲ್ಲಿ ಸೂಚಿಸಲಾದ ಎಲ್ಲಾ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿಗಳನ್ನು ಭರ್ತಿ ಮಾಡಿ ಇದೇ ಕಚೇರಿಗೆ ಸಲ್ಲಿಸಬೇಕು, ತಡವಾಗಿ ಬಂದಂತಹ ಹಾಗೂ ಅಪೂರ್ಣ ದಾಖಲಾತಿ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಹಾಗೂ ಹಿಂಬರಹ ನೀಡದೇ ತಿರಸ್ಕರಿಸಲಾಗುವುದು. ಮೇರಿಟ್ ಆಧಾರದ ಮೇಲೆ ಡೆಸ್ಕ್ ಟಾಪ್ ಕಂಪ್ಯೂಟರ್ ಅಥಾವಾ ಲ್ಯಾಪ್‌ಟಾಪ್ ಖರೀದಿಸಲು ಸಹಾಯಧನ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಕುರೇಕುಪ್ಪ ಪುರಸಭೆ ಕಚೇರಿ ಹಾಗೂ ದೂ.08395–250970ಗೆ ಸಂಪರ್ಕಿಸ ಬಹುದು ಎಂದು ಕುರೇಕುಪ್ಪ ಪುರಸಭೆಯ ಮುಖ್ಯಾಧಿಕಾರಿ ತಿಳಿಸಿದ್ದಾರೆ.

ಕೂಡ್ಲಿಗಿ ಕ್ಷೇತ್ರಕ್ಕೆ ಮಳೆ ಬಂದ್ರೆ ಬೆಳೆ, ನೀರಾವರಿ ಯೋಜನೆಗಳಿಲ್ಲ

ಶಾಸಕ ಡಾ.ಎನ್.ಟಿ.ಶ್ರೀನಿವಾಸ ಕ್ಷೇತ್ರದ ಬರ ಚಿತ್ರಣವನ್ನು ಸಚಿವ ಚೆಲುವರಾಯ ಸ್ವಾಮಿಗೆ ವಿವರಿಸಿದರು । ವಿದ್ಯುತ್ ಸಂಪರ್ಕವನ್ನು 100 ಮೀಟರಿಗೆ ಹೆಚ್ಚಿಸಲು ರೈತರಿಂದ ಮನವಿ

■ ಹಂಪಿ ಟೈಮ್ಸ್ ಕೂಡ್ಲಿಗಿ

ಮಳೆಯಾಶ್ರಿತ ತಾಲೂಕು ಕೂಡ್ಲಿಗಿಯಲ್ಲಿ ಈ ಬಾರಿ ಅತ್ಯಂತ ಭೀಕರ ಬರ ಎದುರಾಗಿದ್ದು ರೈತರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಪರಿಹಾರದ ಹಣವನ್ನು ಸಮರ್ಪಕವಾಗಿ, ತ್ವರಿತವಾಗಿ ನೀಡಲು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಕೃಷಿ ಸಚಿವ ಚೆಲುವರಾಯ ಸ್ವಾಮಿಗೆ ಮನವಿ ಮಾಡಿದರು. ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಬುಧವಾರ ಖಾಸಗಿ ಕಾರ್ಯಕ್ರಮಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ ಕ್ಷೇತ್ರದ ಬರ ಚಿತ್ರಣವನ್ನು ಸಚಿವ ಚೆಲುವರಾಯ ಸ್ವಾಮಿಗೆ ವಿವರಿಸಿ